ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ), ಬೆಂಗಳೂರು ಪ್ರಕಟಣೆ

SHETTIGARA VAANI

ಕನ್ನಡ ಮಾಸಿಕ

# ಶೆಟ್ಟಿಗಾರ ವಾಣಿ

ಬೆಂಗಳೂರು ನಿವಾಸಿ ಕರಾವಳಿ ಮೂಲದ ಶೆಟ್ಟಿಗಾರ ಸಮಾಜದ ಮುಖವಾಣಿ

ಸಂಪುಟ: 1 | ಮಾರ್ಚ್ 2025 | ಸಂಚಿಕೆ: 9 | ಪುಟಗಳು: 12

**ಸಂಪಾದಕ ಮಂಡಳಿ**

ಶ್ರೀ ನಾರಾಯಣ ಶೆಟ್ಟಿಗಾರ್
ಶ್ರೀ ಮಾಧವ ಶೆಟ್ಟಿಗಾರ್, ಯು
ಶ್ರೀ ಪ್ರಕಾಶಚಂದ್ರ, ಆತ್ರಾಡಿ
ಶ್ರೀ ಪ್ರಭಾಕರ ಶೆಟ್ಟಿಗಾರ್, ಎಂ
ಶ್ರೀ ಮಾಧವ ಶೆಟ್ಟಿಗಾರ್, ಶೆಟ್ಟಿಗಾಡು
ಶ್ರೀ ಸುಂದರ ಎಸ್ ಶೆಟ್ಟಿಗಾರ್, ಎಕ್ಕಾರ್
ಶ್ರೀ ದೊಂಬಯ್ಯ ಶೆಟ್ಟಿಗಾರ್
ಶ್ರೀಮತಿ ಬಾನುಮತಿ ಡಿ ಶೆಟ್ಟಿಗಾರ್
ಸಿ.ಎ. ವಿಶ್ರಾಂತ್ ಬಿ ಎಲ್
ಶ್ರೀ ಯತೀಶ್ ಎಲ್. ಶೆಟ್ಟಿಗಾರ್
ಶ್ರೀಮತಿ ಉಷಾ ಚೇತನ್

**ವಿನ್ಯಾಸ ಮತ್ತು ತಂತ್ರಜ್ಞಾನ ನೆರವು**

ಶ್ರೀ ಯಶಸ್ವಿ ಜೆ
ಶ್ರೀ ರಾಮಕೃಷ್ಣ ಸಾಲಿಕೇರಿ

**ವಿಳಾಸ**

ಶೆಟ್ಟಿಗಾರವಾಣಿ, C/o ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ),
ನಂ.8, ಶಾಂತವೇರಿ ಗೋಪಾಲಗೌಡ ನಗರ,
4ನೇ ಅಡ್ಡ ರಸ್ತೆ, ಮೂಡಲಪಾಳ್ಯ, ಬೆಂಗಳೂರು-560072

ಮೊಬೈಲ್: 9535443311
ಇಮೇಲ್: dkpadmashalibng@gmail.com
ವೆಬ್ ಸೈಟ್: www.dkpadmashalibng.in

ಸೂಚನೆ: ಇಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಆಯಾ ಲೇಖಕರ ವೈಯಕ್ತಿಕ ಅಭಿಪ್ರಾಯಗಳು ಮಾತ್ರ; ಪತ್ರಿಕೆಯ ಅಥವಾ ಕೂಟದ ಅಭಿಪ್ರಾಯಗಳಲ್ಲ.


AI generated image: No photo credits required

## ಸ್ವಪ್ರೀತಿಯನ್ನು ಬೆಳೆಸಿಕೊಳ್ಳಬೇಕಾದ ಮಹಿಳೆ

ಮಾರ್ಚ್ 8, ವಿಶ್ವ ಮಹಿಳಾ ದಿನ. ಈ ದಿನ, ಮಹಿಳೆಯರ ಸ್ಥಾನಮಾನ, ಹಕ್ಕು, ಸಾಮರ್ಥ್ಯದ ಕುರಿತಂತೆ ಸಾಕಷ್ಟು ಚರ್ಚೆಯಾಗುತ್ತದೆ. ಇವುಗಳಲ್ಲಿ ನನಗೆ ಬಹಳ ಮುಖ್ಯವೆನಿಸುವುದು ನಾವು ನಮ್ಮ ಗಂಡು ಮತ್ತು ಹೆಣ್ಣು ಮಕ್ಕಳನ್ನು ಬೆಳೆಸುವ ರೀತಿಯಲ್ಲಿ ಇರುವ ವ್ಯತ್ಯಾಸ ಮತ್ತು ಅದನ್ನು ಸರಿಪಡಿಸುವುದರ ಮೂಲಕ ಲಿಂಗ ಸಮಾನತೆಯನ್ನು ಸಾಧ್ಯವಾಗಿಸಬಹುದೆನಿಸುತ್ತದೆ. ಯಾಕೆಂದರೆ, ಬಾಹ್ಯ ಪ್ರಪಂಚದ ಆಗುಹೋಗುಗಳನ್ನು ನಿಯಂತ್ರಿಸುವ ಶಕ್ತಿ ನಮ್ಮೆಲ್ಲರ ಕೈಯಲ್ಲಿ ಇಲ್ಲದಿರಬಹುದು. ಆದರೆ, ಅಲ್ಲಿಗೆ ಭವಿಷ್ಯದ ಮತ್ತು ಜವಾಬ್ದಾರಿಯುತ ನಾಗರಿಕರನ್ನು ಪೂರೈಕೆಮಾಡುವುದು ಪ್ರತಿ ಕುಟುಂಬದ ತಾಯಿ ತಂದೆಯರು. ಆದ್ದರಿಂದ, ನಾವು ಪಾಲನೆಮಾಡುವ ಮಕ್ಕಳು ನಮ್ಮ ಸುಪರ್ದಿಯಲ್ಲಿ ಇರುವಾಗ, ಅವರಿಗೆ ಮುಂದಿನ ದಿನಗಳಲ್ಲಿ ಹೇಗೆ ಲಿಂಗ ಸಮಾನತೆಯನ್ನು ಕಾಯ್ದುಕೊಂಡು ಬದುಕಬೇಕೆಂದು ತಿಳಿಹೇಳಿ ಬೆಳೆಸಿದಲ್ಲಿ ಸಾಕಷ್ಟು ಸಾಮಾಜಿಕ ಸಮಸ್ಯೆಗಳು, ಸಮಸ್ಯೆಗಳಾಗಿ ಉಳಿಯುವುದಿಲ್ಲ. ಮಕ್ಕಳು ಹೆಚ್ಚಾಗಿ ತಮ್ಮ ಹೆತ್ತವರ ವರ್ತನೆಗಳನ್ನು ನೋಡಿ ಅದನ್ನೇ ರೂಢಿಸಿಕೊಳ್ಳುತ್ತಾರೆ. ಅವರ ಮುಂದೆ ನಮ್ಮ ನಡವಳಿಕೆಗಳು ಲಿಂಗ ಸಮಾನತೆಯನ್ನು ಪ್ರತಿಬಿಂಬಿಸಿದಲ್ಲಿ, ಅವರಿಗೂ ಉತ್ತಮ ಮಾದರಿ ದೊರೆತಂತಾಗುತ್ತದೆ. ಹಾಗಿದ್ದಲ್ಲಿ, ನಮ್ಮ ಗಂಡು ಮತ್ತು ಹೆಣ್ಣು ಮಕ್ಕಳನ್ನು ಹೇಗೆ ಬೆಳೆಸಬೇಕು? ನಾವು ಇಲ್ಲಿಯವರೆಗೆ ಬೆಳೆಸುತ್ತಿದ್ದ ಕ್ರಮಗಳಲ್ಲಿನ ಸಮಸ್ಯೆಗಳೇನು? ಇಲ್ಲಿ ತಾಯಿಯಾಗಿ ಹೆಣ್ಣಿನ ಜವಾಬ್ದಾರಿಯೇನು?

ಮೊದಲನೆಯದಾಗಿ, ನಮ್ಮ ದೇಶದಲ್ಲಿ ಮಹಿಳೆಯರ ರಕ್ಷಣೆಗಾಗಿ ಸಾಕಷ್ಟು ಕಾನೂನುಗಳಿವೆ. ಆದರೂ ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚುತ್ತಲೇ ಇದೆ. ಇದನ್ನು ನಾವು ಹೇಗೆ ಅರ್ಥಮಾಡಿಕೊಳ್ಳಬೇಕು? ಮಹಿಳೆಯರನ್ನು ಹೀನಾಯವಾಗಿ ನೋಡುವುದು ಒಂದು ವೈಯಕ್ತಿಕ ಸಮಸ್ಯೆಯೇ ಅಥವಾ ಸಾಮಾಜಿಕ ಸನ್ನಿಯೇ? ನಮ್ಮ ಸಾಮಾನ್ಯ ಪ್ರಜ್ಞೆಗೆ ಗೊತ್ತಿರುವಂತೆ ಮಹಿಳೆಯರನ್ನು ಕೀಳಾಗಿ ಕಾಣುವುದು ಒಂದು ಸಾಮಾಜಿಕ ಸಮಸ್ಯೆ, ಇದೊಂದು ಕೆಟ್ಟ ಮನಸ್ಥಿತಿ. ಈ ಸಮಸ್ಯೆಯ ಬೀಜ, ನಾವು ನಮ್ಮ ಗಂಡುಮಕ್ಕಳನ್ನು ಬೆಳೆಸುವುದರಲ್ಲಿಯೇ ಇದೆ. ಸಾಮಾನ್ಯವಾಗಿ ಮಕ್ಕಳನ್ನು ಬೆಳೆಸುವ ಹೆಚ್ಚಿನ ಜವಾಬ್ದಾರಿ ತಾಯಂದಿರೇ ನಿಭಾಯಿಸುವುದರಿಂದ, ತಮ್ಮ ಗಂಡು ಮಕ್ಕಳನ್ನು ಸರಿಯಾಗಿ

ಬೆಳೆಸುವುದರಲ್ಲಿ ತಾಯಂದಿರು ಜಾಗರೂಕತೆ ವಹಿಸುವುದು, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಕೊಡುಗೆಯೆನ್ನಬಹುದು. ನಾವು ಗಮನಿಸುವಂತೆ, ಗಂಡುಮಕ್ಕಳಿಗೆ ಮನೆಕೆಲಸವನ್ನು ಕಲಿಸುವುದಾಗಲಿ, ತನ್ನ ಬಟ್ಟೆ ಒಗೆದುಕೊಳ್ಳುವುದಾಗಲಿ, ಮತ್ತು ಅಡುಗೆ ಮಾಡುವುದನ್ನು ಹೇಳಿಕೊಡುವುದಾಗಲಿ ಅಥವಾ ಮಾಡಿಸುವ ತಾಯಂದಿರು ಬಹಳ ಕಡಿಮೆಯೆನ್ನಬಹುದು. ಇದನ್ನು ಕಲಿಸಿಕೊಡುವುದರಿಂದ ಗಂಡುಮಕ್ಕಳು ಸ್ವಾವಲಂಬಿಯಾಗಿ ಬದುಕಲು ಕಲಿಯುವುದಲ್ಲದೆ, ಈ ಕೆಲಸವನ್ನು ಸಾಂಪ್ರದಾಯಿಕವಾಗಿ ಮಾಡುತ್ತಾ ಬಂದಿರುವ ಹೆಣ್ಣು ಮಕ್ಕಳನ್ನು ಗೌರವಿಸುವುದನ್ನು ಕಲಿಯುತ್ತಾರೆ. ಇಲ್ಲವಾದಲ್ಲಿ, ಈ ಕೆಲಸ ಮಾಡುವ ಮನೆಯ ಹೆಣ್ಣುಮಕ್ಕಳನ್ನು ಸೇವಕರಂತೆಯೇ ಕಾಣುತ್ತಾರೆ. ನಾವು, ನಮ್ಮ ಗಂಡುಮಕ್ಕಳು ಬೇಕಾಬಿಟ್ಟಿಯಾಗಿ ಬದುಕುವುದನ್ನು ಗಂಭೀರವಾಗಿ ತಲೆಕೆಡಿಸಿಕೊಳ್ಳುವುದಿಲ್ಲ, ಬದಲಾಗಿ ಗಂಡು ಮಕ್ಕಳು ಇರುವುದೇ ಹೀಗೆ ಎಂದು ಸಮರ್ಥನೆ ಮಾಡಿಕೊಳ್ಳುತ್ತೇವೆ. ಜೊತೆಗೆ, ಹೆಣ್ಣುಮಕ್ಕಳನ್ನು ಸಮಾನವಾಗಿ, ಗೌರವದಿಂದ ನಡೆಸಿಕೊಳ್ಳುವುದನ್ನು ನಮ್ಮ ಗಂಡು ಮಕ್ಕಳಿಗೆ ಹೇಳಿಕೊಟ್ಟಲ್ಲಿ, ಮುಂದಿನ ಜನಾಂಗದ ಹೆಣ್ಣುಮಕ್ಕಳಾದರೂ ನೆಮ್ಮದಿಯಿಂದ ಮತ್ತು ಸುರಕ್ಷಿತವಾಗಿ ಬದುಕುತ್ತಾರೆ. ಇದು ಪ್ರತಿ ಗಂಡು ಹೆತ್ತ ತಾಯಿ, ತನ್ನ ಹೆಣ್ಣು ಕುಲಕ್ಕೆ ಮಾಡುವ ಸಮಾಜಸೇವೆ. ಇದನ್ನು, 'ನಾನು ಅನುಭವಿಸದ ಸ್ವಾತಂತ್ರ್ಯ ಉಳಿದವರು ಯಾಕೆ ಅನುಭವಿಸಬೇಕು' ಎನ್ನುವ ಸಂಕುಚಿತ ದೃಷ್ಟಿಕೋನದಿಂದ ಹೊರಬಂದು, ತಾಯಂದಿರು ಸ್ವಸ್ಥ ಸಮಾಜವನ್ನು ನಿರ್ಮಿಸಬೇಕಾಗಿದೆ.

ಇನ್ನು ನಮ್ಮ ಹೆಣ್ಣುಮಕ್ಕಳನ್ನು ಬೆಳೆಸುವಾಗ ನಾವು ಮಾಡುವ ದೊಡ್ಡ ತಪ್ಪೆಂದರೆ, ಅವರಿಗೆ ಪ್ರಪಂಚದ ಕುರಿತಾಗಿ ಅತಿಯಾದ ಭೀತಿಯನ್ನು ತಲೆಯಲ್ಲಿ ತುಂಬುವುದು. ಇದರಿಂದಾಗಿ ಅವರು ಸಹಜವಾಗಿ ಬದುಕುವುದನ್ನು ಕಲಿಯುವುದಿಲ್ಲ, ಬದಲಾಗಿ, ಜಗತ್ತಿನ ಕುರಿತಂತೆ ಭಯದಿಂದಲೇ ಮತ್ತು ಮನೆಯವರಿಗೆ ಅವಲಂಬಿತರಾಗಿಯೇ ಬದುಕುತ್ತಾರೆ. ಹೆಣ್ಣುಮಕ್ಕಳಿಗೆ ನಾವು ಪ್ರತಿ ಮಾತಿನಲ್ಲೂ, 'ನೀನು ಹೆಣ್ಣು, ಹಾಗಾಗಿ ಹೀಗಿರಬೇಕು,ಅಥವಾ ಹೀಗಿರಬಾರದು' ಎನ್ನುತ್ತಾ ಅವರಲ್ಲಿ ಆತ್ಮವಿಶ್ವಾಸವನ್ನು ಕುಗ್ಗಿಸುತ್ತೇವೆ. ಹೆಣ್ಣನ್ನು ಹೀಗೆ ಅತಿಯಾದ ನಿಯಂತ್ರಣದಲ್ಲಿ ಮತ್ತು ತನ್ನ ಸ್ವಅರಿವು ಕಂಡುಕೊಳ್ಳದಂತೆ ಬೆಳೆಸುತ್ತಿರುವುದರಿಂದಲೇ, ಅವಳನ್ನು ವಸ್ತುವಾಗಿ ಪರಿಗಣಿಸುವ ದರಿದ್ರ ಮನಸ್ಥಿತಿ ಸಮಾಜದಲ್ಲಿ ನಿರಾಂತಕವಾಗಿ ಮುಂದುವರಿದಿದೆ.

ಹಾಗಾಗಿ, ನಾವಿಂದು ಹೆಣ್ಣು ಮಕ್ಕಳಿಗೆ ಕಲಿಸಿಕೊಡಬೇಕಾದುದು, ಸ್ವಪ್ರೀತಿ. ಅವಳಲ್ಲಿ, ತಾನು ಗಂಡಿಗಿಂತ ಕೀಳಲ್ಲ, ಮನಸ್ಸು ಮಾಡಿದರೆ ಏನು ಬೇಕಾದರೂ ಸಾಧಿಸಬಹುದೆನ್ನುವ ಆತ್ಮವಿಶ್ವಾಸವನ್ನು ಉದ್ದೀಪನಗೊಳಿಸುವುದು ಮತ್ತು ತನ್ನನ್ನು ಮನಸಾರೆ ಒಪ್ಪಿಕೊಂಡು ಪ್ರೀತಿಸುವುದನ್ನು ತಿಳಿಸಿಹೇಳುವುದು. ಇದು ಹೆಣ್ಣಿನ ಸ್ವಾರ್ಥವಲ್ಲ, ಬದಲಾಗಿ, ಆತ್ಮಗೌರವ ಬೆಳೆಸಿಕೊಳ್ಳಲು ಅಗತ್ಯ. ಸಾಮಾನ್ಯವಾಗಿ, ಹೆಣ್ಣುಮಕ್ಕಳನ್ನು ಬೆಳೆಸುವಾಗ, ಎಲ್ಲರನ್ನು ಪ್ರೀತಿಸುವ ಮತ್ತು ಸೇವೆ ಮಾಡುವ ಬುದ್ಧಿಮಾತುಗಳನ್ನು ಹೇಳುತ್ತಾ, ಎಲ್ಲಾ ಕೆಲಸಗಳನ್ನು ಕಲಿಸುತ್ತಾ, ಅವಳಲ್ಲಿ ಒಂದು ಪರಿಪೂರ್ಣ ವ್ಯಕ್ತಿತ್ವ ರೂಪಿಸುತ್ತಿದ್ದೇವೆ ಎನ್ನುವ ಭ್ರಮೆಯಲ್ಲಿರುತ್ತೇವೆ. ಆದರೆ, ಅವರಲ್ಲಿ ಮುಖ್ಯವಾಗಿ ಉದ್ದೀಪನಗೊಳಿಸಬೇಕಾದ ಸ್ವಪ್ರೀತಿಯನ್ನು ಮರೆತುಬಿಡುತ್ತೇವೆ. ಅವಳಲ್ಲಿ, ಎಲ್ಲರನ್ನು ಪ್ರೀತಿಯಿಂದ ನೋಡಿಕೊಳ್ಳುವ, ಗೌರವಿಸುವ ಸೇವಾ ಮನೋಭಾವ ಬೆಳೆಸುವ ನಾವು, ತನ್ನ ಕುರಿತಂತೆ ಕೀಳರಿಮೆ ತುಂಬುತ್ತೇವೆ. ತನ್ನ ಸಂಸಾರದವರನ್ನು ಖುಷಿ ಪಡಿಸುವುದರಲ್ಲಿಯೇ ತನ್ನ ಬಾಳಿನ ಸಾರ್ಥಕ್ಯ ಅಡಗಿದೆ ಎಂದು ಪರಿಭಾವಿಸುವ ಹೆಣ್ಣಿಗೆ, ತನ್ನ ಬದುಕಿನತ್ತ ಒಂದು ಕ್ಷಣ ಒಳನೋಟ ಬೀರುವ ಆಸ್ಪದವನ್ನೇ ಅವಳಿಗೆ ನೀಡುವುದಿಲ್ಲ.

ಬಹುಶಃ, ಅದಕ್ಕಾಗಿಯೇ ಹೆಣ್ಣುಮಕ್ಕಳಿಗೆ ಬಾಲ್ಯವಿವಾಹ ಮಾಡುತ್ತಿದ್ದರೆನಿಸುತ್ತದೆ. ತನ್ನನ್ನು ತಾನು ಮತ್ತು ಪ್ರಪಂಚದ ಆಗುಹೋಗುಗಳನ್ನು ಅರಿಯುವ ಮೊದಲೇ ವಿವಾಹವಾಗಿ, ಮಕ್ಕಳ ಹೆತ್ತು ತಾಯ್ತನದ ಜವಾಬ್ದಾರಿ ಹೊರುವ ಹೆಣ್ಣು, ಅದರಲ್ಲಿಯೇ ತನ್ನ ಉಳಿದ ಜೀವತಾವಧಿಯನ್ನು ಕಳೆದು ಹೋಗುವುದೇ ಹೆಚ್ಚು. ಒಂದು ವೇಳೆ ಹೆಣ್ಣು ತನ್ನ ಸಾಮರ್ಥ್ಯವನ್ನು ಅರಿತುಕೊಳ್ಳುವ ಪ್ರಬುದ್ಧ ವಯಸ್ಸು ಮತ್ತು ಜ್ಞಾನ ಲಭಿಸಿದಲ್ಲಿ, ಈ ಪ್ರಪಂಚದ ಅಸಮತೋಲಿತ ವ್ಯವಸ್ಥೆಯನ್ನು ಪ್ರಶ್ನಿಸುವುದಲ್ಲದೆ, ಅವುಗಳಿಗೆ ಸವಾಲೊಡ್ಡಿ ಬದುಕಿ ಸಾಧಿಸುವ ಸಾಧ್ಯತೆಯೇ ಅಧಿಕ. ಹಾಗಾಗಿ, ಹೆಣ್ಣನ್ನು ಸ್ವಅರಿವಿನ ಜಗತ್ತಿಗೆ ಪರಿಚಯಿಸದೇ, ಬರಿ ಚಾಕರಿ ಮಾಡಿಸಿಕೊಂಡು, ಗಂಡು ವಿಜೃಂಭಿಸುತ್ತಾನೆ.

ಆದ್ದರಿಂದ, ನಮ್ಮ ಹೆಣ್ಣುಮಕ್ಕಳಲ್ಲಿ ಆತ್ಮವಿಶ್ವಾಸ ತುಂಬಿ ತಮ್ಮಿಷ್ಟದ ಬದುಕನ್ನು ತಾವೇ ರೂಪಿಸಿಕೊಳ್ಳುವ ಆತ್ಮಬಲವನ್ನು, ಪ್ರತಿ ಹೆಣ್ಣು ಹೆತ್ತ ತಾಯಂದಿರು ಬೆಳೆಸಬೇಕು. ಹೆಣ್ಣು ಮಕ್ಕಳನ್ನು ಬೆಳೆಸುವುದೆಂದರೆ, ಒಂದಿಷ್ಟು ಚಿನ್ನ, ಆಸ್ತಿ ಮಾಡಿ ವಿಜೃಂಭಣೆಯಿಂದ ಮದುವೆ ಮಾಡಿ ಜವಾಬ್ದಾರಿಯಿಂದ ಕೈತೊಳೆದುಕೊಳ್ಳುವುದಲ್ಲ. ಅವರಲ್ಲಿ ಸ್ವಪ್ರೀತಿ ತುಂಬಿ, ತಮ್ಮ ಕಾಲ ಮೇಲೆ ತಾವೇ ನಿಲ್ಲುವಂತೆ ಮಾಡುವುದು. ವರ್ತಮಾನ ಕಾಲದ ತಾಯಂದಿರಿಂದು ಹೀಗೆ ಯೋಚಿಸಬೇಕಾಗಿದೆ- 'ತಾವು ಹೇಗೂ ತಮ್ಮಿಚ್ಛೆಯಂತೆ ಬದುಕನ್ನು ಕಟ್ಟಿಕೊಳ್ಳಲಾಗಲಿಲ್ಲ. ತನ್ನ ಮಗಳಾದರೂ ಅವಳ ಮನದಾಸೆಯಂತೆ ಬದುಕನ್ನು ರೂಪಿಸಿಕೊಳ್ಳಲಿ. ಆತ್ಮವಿಶ್ವಾಸದಿಂದ ಬದುಕನ್ನು ಪರಿಪೂರ್ಣವಾಗಿ ಅನುಭವಿಸಲಿ' ಎಂದು ಮನಃಪೂರ್ವಕವಾಗಿ ಬೆಂಬಲಿಸಬೇಕು. ಈ ರೀತಿ, ಪ್ರತಿ ತಾಯಿ ಯೋಚಿಸಿದಲ್ಲಿ, ಮತ್ತು ಅದರಂತೆ ನಡೆದುಕೊಂಡಲ್ಲಿ, ಹೆಣ್ಣು ಮಕ್ಕಳು ಗಂಡಿನ ಹಂಗಿನಲ್ಲಿ ಎರಡನೆಯ ದರ್ಜೆಯ ಪ್ರಜೆಯಾಗಿ ಬದುಕುವುದು ತಪ್ಪುತ್ತದೆ. ಒಂದು ಹೆಣ್ಣು ಸ್ವಅರಿವು ಜಾಗ್ರತಗೊಳಿಸಿಕೊಂಡಲ್ಲಿ, ಇದರಿಂದ ಸುತ್ತಲಿನ ಹಲವಾರು ಹೆಣ್ಣುಮಕ್ಕಳು ಪ್ರೇರಣೆ ಪಡೆದು ಅದರಂತೆ ತಾವೂ ನಡೆದುಕೊಳ್ಳುತ್ತಾರೆ.

ಹಾಗಾಗಿ, ನಮ್ಮ ಸಬಲೀಕರಣ ನಮ್ಮ ಕೈಯಲ್ಲಿದೆ. ಈ ಶಕ್ತಿಯನ್ನು ಸಮರ್ಪಕವಾಗಿ ಬಳಸಿಕೊಂಡು, ಅಸಾಧ್ಯವಾದುದನ್ನು ಸಾಧ್ಯವಾಗಿಸೋಣ. ನಾವು ಪ್ರತಿಯೊಬ್ಬರೂ ಸ್ವಪ್ರೀತಿ ಬೆಳೆಸಿಕೊಂಡು ಆತ್ಮವಿಶ್ವಾಸದಿಂದ ಯಾರ ಹಂಗಿಲ್ಲದೆ ಬದುಕಿ ತೋರಿಸಿದರೆ, ಪ್ರಪಂಚವು ಹೆಣ್ಣುಮಕ್ಕಳನ್ನು ನೋಡುವ ದೃಷ್ಟಿ ತನ್ನಷ್ಟಕ್ಕೆ ಬದಲಾಗುತ್ತದೆ.



**ಡಾ. ಜ್ಯೋತಿ**
**ಸಹಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ,**
**ತುಮಕೂರು ವಿಶ್ವವಿದ್ಯಾನಿಲಯ,**
**ತುಮಕೂರು**

# ಜೀವನ ನಾವು ಸ್ವೀಕರಿಸಿದಂತೆ

"ಏನಮ್ಮಾ! ಹೇಗೆ ಸರಿಯಿತು ಈ ದಿನ? ನಿನಗೋಸ್ಕರ ಸ್ವಲ್ಪ ಬೇಗವೇ ಹೊರಟಿದ್ದೆ. ಬರುವಾಗ ಟ್ರಾಫಿಕ್. ಒಂದು ಗಂಟೆ ಹಾಳಾಯಿತು. ಸ್ನಾನ ಮಾಡಿ ಬೇಗ ಬರುತ್ತೇನೆ. ಇವತ್ತು ನಿನ್ನ ಕೈಯಾರೆ ಬಿಸಿ ಬಿಸಿ ಕಾಫಿ ಮಾಡು" ಎಂದು ಪ್ರೀತಿಯಿಂದ ಹೇಳಿ ಹೆಗಲು ತಟ್ಟಿ ಬಚ್ಚಲು ಮನೆಗೆ ಹೋದ ಪತಿಯನ್ನು ಕಂಡು ಸಂಧ್ಯಾ ರೇಖಾರ ಮನದುಂಬಿ ಬಂತು.

ಬೇಗ ಬೇಗನೆ ಕಾಫಿ ಮತ್ತು  ನೀರುಳ್ಳಿ ಬಜೆ ತಯಾರಿಸಿ ಪತಿಯ ಕೋಣೆಯತ್ತ ಹೋದ ಅವರಿಗೆ ನಿರಾಸೆಯಾಯಿತು. ಶಿವಾನಂದ ರಾಯರು ತಮ್ಮ ಕೋಣೆಯಲ್ಲಿ ಮದ್ಯ ಸೇವನೆಗೆ ಕುಳಿತಾಗಿತ್ತು. ಮನೆಗೆ ಕೊಂಚ ಬೇಗ ಬಂದರೂ ಇವರ ಹಣೆ ಬರೆಹ ಇಷ್ಟೇ. ನೀರುಳ್ಳಿ ಬಜೆಯಿದ್ದ ತಟ್ಟೆಯನ್ನು ಅಲ್ಲಿಟ್ಟು ಹಿಂದಿರುಗಿದ ಸಂಧ್ಯಾ ರೇಖಾ ಕಾರನ್ನು ಒರೆಸುತ್ತಿದ್ದ ದಯಾನಂದನಿಗೆ ಆ ಕಾಫಿಯನ್ನು ಕೊಟ್ಟು ಅವನ ಮುಖವನ್ನೇ ನೋಡಿದಾಗ ಅವರ ಮೊಗದಲ್ಲಿದ್ದ ನೋವು ಅವನಲ್ಲಿ ಬೇಸರವನ್ನುಂಟು ಮಾಡಿತ್ತು.

ಅಲ್ಲೇ ಇದ್ದ ಸಂಧ್ಯಾ ರೇಖಾರ ಮಾವ, "ಇವತ್ತಿನ ದಿನ ಹೇಗೆ ಕಳೆಯಿತು ದಯಾನಂದ? ನನ್ನ ಮಗ..." ಎನ್ನುವಾಗಲೇ ಅವರ ಕಣ್ಣಿಂದ ನೀರು ಒಸರಿತ್ತು. ಅವರನ್ನು ಅಲ್ಲೇ ಇದ್ದ ಕುರ್ಚಿಯಲ್ಲಿ ಕುಳ್ಳಿರಿಸಿದ ದಯಾನಂದ.

"ಸಂಧ್ಯಕ್ಕ, ಇವತ್ತಿನ ಕಥೆಯೂ ಅದೇ. ಬರುವಾಗ ಅಲ್ಲಿಗೆ ಹೋಗಿಯೇ ಬಂದಿದ್ದು. ನಾನು ಹೇಳಿ ಕೇಳಿ ಅವರ ಕಾರಿನ ಚಾಲಕ. ಮಾಲಿಕ ಹೇಳಿದಂತೇ ಕೇಳಬೇಕಲ್ಲವೇ?"



ಕೆಲಸದಿಂದ ತೆಗೆಯುವರೇನೋ ಎಂಬ ಭಯ. ನಿಮ್ಮಂತಹ ಸಜ್ಜನರಿಗೆ ಇಂತವರು ಸಿಕ್ಕಿದ್ರಲ್ವಾ ಎನ್ನುವ ಬೇಜಾರು.

ಇವತ್ತು ಬರುವಾಗ "ಆನಂದ ಜ್ಯುವೆಲರ್ಸ್ ಗೆ ಭೇಟಿ ನೀಡಿ ಏನೋ ಖರೀದಿ ಮಾಡಿದ್ರು. ಏನೆಂದು ಗೊತ್ತಿಲ್ಲ." ಎಂದು ಕಾರಿನ ಚಾಲಕ ದಯಾನಂದ ಮೆಲ್ಲನೆ ಉಸುರಿದಾಗ ಸಂಧ್ಯಾ ರೇಖಾರ ಮೊಗದಲ್ಲಿ ನೋವಿನ ನಗು.

ಅಷ್ಟರಲ್ಲಿ "ಏಯ್, ದಯಾನಂದ. ನಾನು ಕೊಂಡಿದ್ದ ಕಂಠಿ ಹಾರ ಕಾರಲ್ಲೇ ಇದೆ. ತಾರೋ ಇಲ್ಲಿ" ಎಂದು ತೇಲಾಡುತ್ತ ಅಲ್ಲಿಗೆ ಬಂದರು ಶಿವಾನಂದ ರಾಯರು.

"ಕಾರಲ್ಲಿ ಇಲ್ಲ ಯಜಮಾನ್ರೇ" ವಿನೀತನಾಗಿ ನುಡಿದ ದಯಾನಂದ.

"ಇಲ್ಲಾ ಅಂದ್ರೇನೋ, ನಾನು ಸಂಧ್ಯಾಗೆಂದು ಖರೀದಿಸಿದ ಹಾರ ಅದು. ಇವತ್ತು ನಮ್ಮ ಮದುವೆ ಆದ ದಿನ. ಎಲ್ಲಿ ಹೋಗುತ್ತೆ ಅದು? ಅದಕ್ಕೇನು ಕೈಕಾಲು ಇದೆಯಾ? ಏಯ್, ಬಡ್ಡಿ ಮಗನೇ ನೀನೇ ತೆಗೆದಿರಬೇಕು. ಜ್ಯುವೆಲ್ಲರಿಗೆ ಹೋಗಿ ಬಂದಿದ್ದು ಹೇಗೂ ನೋಡಿರುವೆ. ನಿಂದೇ ಕೈಚಳಕ" ಎಂದು ತೊದಲುತ್ತ ಇನ್ನೆರಡು ಹೆಜ್ಜೆ ಮುಂದಿಟ್ಟ ಶಿವಾನಂದ ರಾಯರು "ಇವನೇ ಕಳ್ಳ" ಎಂದು ದಯಾನಂದನಿಗೆ ಹೊಡೆಯಲು ಕೈಯೆತ್ತಿದವರು ಹೊಡೆಯಲಾಗದೆ ಅಲ್ಲೇ ಕುಸಿದರು.

ಸಾರಾಯಿ ಕುಡಿದಾಗ ಅರೆ ಪ್ರಜ್ಞೆ ಶಿವಾನಂದರಿಗೆ.

ಮಗನ ಅವಸ್ಥೆಯನ್ನು ನೋಡಿ ಅಪ್ಪನಲ್ಲಿ ಜುಗುಪ್ಸೆ. ಮೌನವಾಗಿ ಬಾವಿಯತ್ತ ಸಾಗಿದವರು ಅಲ್ಲೇ ಪಕ್ಕದಲ್ಲಿ ಕೆಲಸ ಮಾಡುತ್ತಿದ್ದ ಶಂಕರನ ಹತ್ತಿರ ನಾಲ್ಕು ಕೊಡ ನೀರು ತಂದು ಅಂಗಳದಲ್ಲಿ ಬಿದ್ದಿದ್ದ ಶಿವಾನಂದರ ಪಕ್ಕ ಇರಿಸಲು ಹೇಳಿದರು. ಗಾಬರಿಯಾಗಿ ನಿಂತಿದ್ದ ದಯಾನಂದನ ಹತ್ತಿರ ಕೊಡದಲ್ಲಿದ್ದ ನೀರನ್ನು ಶಿವಾನಂದ ರಾಯರ ಮೇಲೆ ಹೊಯ್ಯುವಂತೆ ಹೇಳಿದರು. ಆತ ತನ್ನಿಂದಾಗದೆಂದು ಹಿಂದೆ ಸರಿದಾಗ ತಾನೇ ನೀರಿದ್ದ ಕೊಡಗಳನ್ನು ಎತ್ತಿ ಮಗನ ತಲೆಯ ಮೇಲೆ ಸುರಿದರು.

ಬರೋಬ್ಬರಿ ನಾಲ್ಕು ಕೊಡ. ಕುಡಿದ ಅಮಲು ಹಾರಿ ಹೋಗಿದೆ. ತಡಬಡಾಯಿಸಿ ಎದ್ದ ಶಿವಾನಂದರು "ಅಪ್ಪಯ್ಯ, ಇದೇನಿದು, ಏನಾಗಿದೆ ನಿಮಗೆ?" ಎಂದಾಗ ಸಿಡಿದೆದ್ದ ತಂದೆ "ಏನಾಗಿದೆ ಹೇಳುವೆ. ಮೊದಲು ಕಂಠಿ ಹಾರ ಎಲ್ಲಿಗೆ ಹೋಯ್ತು ಹೇಳಯ್ಯ? ಅಪ್ಪ ಮಾಡಿ ಇಟ್ಟದ್ದೆಲ್ಲ ನೀನು ಕರಗಿಸಲು ಆರಂಭ ಮಾಡಿ ಆಯ್ತಲ್ವಾ? ಜೊತೆಗೆ ಈ ಕುಡಿತದ ಚಟ.

“ಯಾರಿಗೆ ಹಾರ ಕೊಟ್ಟು ಬಂದಿರುವೆ? ಬೆನ್ನ ಹಿಂದೆ ನಡೆಯುವುದು ತಿಳಿದಿಲ್ಲವೆಂದು ಭಾವಿಸಿದೆಯಾ? ಯಾರವಳು? ಸತ್ಯ ಹೇಳು. ಇವತ್ತು ಎಲ್ಲದಕ್ಕೂ ಒಂದು ಮುಕ್ತಾಯ ಹಾಡಬೇಕು" ಎಂದು ಅತ್ತಿತ್ತ ಹೋಗತೊಡಗಿದರು. ಮಗ ಮಾತಾಡದೇ ಅಪ್ಪನನ್ನೇ ನೋಡತೊಡಗಿದರು.

"ನೀನು ಹೇಳದಿದ್ದರೆ ನಾನೇ ತಿಳಿದುಕೊಳ್ಳೇನೆ" ಎಂದು ಕಾರನ್ನೇರಿ ಕುಳಿತು "ಏಯ್! ದಯಾನಂದ ಕಾರು ಚಲಾಯಿಸು" ಎಂದರು.

* * * * * * *

ಯಾರೆಂದು ನೋಡುವ ಕುತೂಹಲದಿಂದ ಆ ಮನೆಯ ಒಳ ಹೋದ ಸಂಧ್ಯಾರ ಮಾವನಿಗೆ ಗೋಡೆಗೆ ಅಂಟಿಸಿದ್ದ ಫೋಟೋ ಅಣಕಿಸಿದಂತೆ ಆಯಿತು. ತಲೆ ತಗ್ಗಿಸಿ ನಿಂತವರಿಗೆ ಹಿಂದೆಯೇ ಬಂದಿದ್ದ ಶಿವಾನಂದ ರಾಯರು ಮತ್ತು ಸಂಧ್ಯಾ ರೇಖಾ ಮಾತನಾಡದೇ ಮೌನವಾಗಿ ನಿಂತಿದ್ದು ಗೊಂದಲವನ್ನುಂಟು ಮಾಡಿತ್ತು.

ಮೌನ ಮುರಿದ ಶಿವಾನಂದರು ತನ್ನ ಮಡದಿಯನ್ನು ನೋಡುತ್ತ "ಸಂಧ್ಯಾ, ಗೋಡೆಯ ಮೇಲಿರುವ ಫೋಟೋ ನಮ್ಮಪ್ಪನ ಎರಡನೇ ಹೆಂಡತಿಯವರದ್ದು. ನನಗೆ ಅಪ್ಪನ ಸ್ನೇಹಿತರೊಬ್ಬರು ಹೇಳಿದ ವಿಷಯ. ಅಲ್ಲೆರಡು ಮಕ್ಕಳು ನಿಂತಿದ್ದಾರಲ್ವಾ? ಅವರು ನಮ್ಮಪ್ಪನ ಮಕ್ಕಳು. ನನಗೆ ತಮ್ಮ - ತಂಗಿ. ಕಳೆದ ವರ್ಷ ಇವರ ತಾಯಿ ನಿಧನರಾದರು. ನಮ್ಮಪ್ಪ ನನ್ನ ತಾಯಿ ಚಿಕ್ಕ ವಯಸ್ಸಿನಲ್ಲೇ ನಿಧನರಾದ ಬಳಿಕ ಇವರನ್ನು ವಿವಾಹವಾಗಿದ್ದಂತೆ. ಆದರೆ ಕ್ಷುಲಕ ಕಾರಣಕ್ಕೆ ಇವರನ್ನೂ ದೂರವಿಟ್ಟರು. ಯಾವುದೇ ಸಂಪರ್ಕ ಇರಿಸಿಕೊಳ್ಳಲಿಲ್ಲ. ಪಾಪ ಮಕ್ಕಳಿಬ್ಬರು ಚಿಕ್ಕವರು. ಹದಿನೆಂಟು - ಇಪ್ಪತ್ತರ ವಯಸ್ಸು. ಆದರೆ ಉತ್ತಮ ಗುಣ ನಡತೆ ಹೊಂದಿದವರು. ವಿಷಯ ಅಪ್ಪನಿಗೆ ತಿಳಿಸಿ ಮನೆಗೆ ಕರೆ ತರಲು ಧೈರ್ಯವಾಗಲಿಲ್ಲ. ನಿನ್ನಲ್ಲೂ ಹೇಳಿಕೊಳ್ಳಲಾಗಲಿಲ್ಲ. ಇಂದು ಖರೀದಿಸಿದ ಹಾರ ನಿನಗಾಗಿಯಾದರೂ ಮನಸ್ಸು ತಡೆಯಲಿಲ್ಲ. ನನ್ನ ತಂಗಿಗಾಗಿ ಇಲ್ಲೇ ಭದ್ರವಾಗಿ ಇರಿಸಿರುವೆ. ಈ ಕಾರಣದಿಂದಾಗಿಯೇ ಆಗಾಗ ಮನೆಯಲ್ಲೇ ಕುಡಿಯಲಾರಂಭಿಸಿದ್ದು. ತಪ್ಪು ತಿಳಿಯ ಬೇಡ. ಮುಂದೆಂದೂ ಕುಡಿಯುವುದಿಲ್ಲ, ಸುಳ್ಳು ಹೇಳುವುದಿಲ್ಲ" ಎಂದು ಕೈ ಮುಗಿದಾಗ ತಡೆದ ಸಂಧ್ಯಾ ಆ ಮಕ್ಕಳನ್ನು ತನ್ನತ್ತ ಕರೆದು ಅಪ್ಪಿಕೊಂಡರು.

ಮಾವನ ಮೊಗವಾಡ ಸೊಸೆಯ ಮುಂದೆ ಕಳಚಿ ಬಿದ್ದರೂ ಆಕೆ ಅವರನ್ನೂ ನೋಯಿಸಲು ಮುಂದಾಗಲಿಲ್ಲ. ಪ್ರಯೋಜನವೇನು?

* * * * * * *

ಇಂದು ಮಕ್ಕಳಿಬ್ಬರನ್ನು ತಮ್ಮ ಮಕ್ಕಳಾಗಿ ದತ್ತು ಸ್ವೀಕಾರ ಮಾಡಿದ್ದಾರೆ ಮಕ್ಕಳಿಲ್ಲದ ಸಂಧ್ಯಾ - ಶಿವಾನಂದರು. ಮದುವೆಯಾಗಿಯೂ ದೂರವಿರಿಸಿದ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಸಂಧ್ಯಾರ ಮಾವ ತೀರ್ಥ ಯಾತ್ರೆಗೆ ಹೋದವರು ಹಿಂದಿರುಗಿಲ್ಲ.



ಶೋಭಾ ಹರಿಪ್ರಸಾದ
ಶೆಟ್ಟಿಗಾರ
ಉಡುಪಿ

# ಸಂಪಾದಕ ವಾಣಿ



## **ನಾರಾಯಣ** ಶೆಟ್ಟಿಗಾರ್

***"ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ***
***ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ"***

'ಯುಗಾದಿ' ಎಂದರೆ ಹೊಸ ಯುಗದ ಪ್ರಾರಂಭ ಎಂದರ್ಥ. ಅರ್ಥಾತ್ ಇದು ಹೊಸ ವರ್ಷದ ಮೊದಲ ದಿನ. ಚೈತ್ರ ಮಾಸದ ಮೊದಲ ದಿನ. ಯುಗಾದಿ ದಿನದಂದು ಬ್ರಹ್ಮ ದೇವನು ಬ್ರಹ್ಮಾಂಡವನ್ನು ಸೃಷ್ಟಿಸಲು ಪ್ರಾರಂಭ ಮಾಡಿದನೆಂದು ಹೇಳಲಾಗುತ್ತದೆ. ಅದಾದ ಬಳಿಕ ಬ್ರಹ್ಮನು ಸಮಯ ತಿಳಿಯಲು ವರ್ಷ, ತಿಂಗಳು, ಪಕ್ಷ, ವಾರ, ದಿನಗಳನ್ನು ಸೃಷ್ಟಿ ಮಾಡಿದನಂತೆ. ನಮ್ಮ ಒಂದು ವರ್ಷ ಬ್ರಹ್ಮನಿಗೆ ಒಂದು ದಿನ.

ಜೀವನದ ಸಿಹಿ ಕಹಿಗಳೆರಡರ ಅನುಭವವೂ ವರ್ಷದ ಮೊದಲ ದಿನವೇ ಸಿಗಬೇಕೆನ್ನುವ ಸದಾಶಯದ ದ್ಯೋತಕವಾಗಿ ಬೇವು ಬೆಲ್ಲಗಳ ಮಿಶ್ರಣವನ್ನು ಯುಗಾದಿಯ ದಿನ ತಿನ್ನುವ ಸಂಪ್ರದಾಯ ನಡೆದು ಬಂದಿದೆ. ತಿಂದ ಮೇಲೆ ಬೆಲ್ಲವು ಹೊಟ್ಟೆಯೊಳಗೆ ಶಾಖ ಉತ್ಪತ್ತಿ ಮಾಡಿದರೆ ಬೇವು ಅದರ ಉಪಶಮನ ಮಾಡುತ್ತದೆ.

ಸೌರಮಾನ ಪದ್ಧತಿಯ ಪ್ರಕಾರ ಸೂರ್ಯನು ಅಶ್ವಿನೀ ನಕ್ಷತ್ರವನ್ನು ಪ್ರವೇಶ ಮಾಡುವ ದಿನವನ್ನು ಸೌರ ಯುಗಾದಿ ಎಂದು ಆಚರಿಸಲಾಗುತ್ತದೆ. ಕರಾವಳಿಯಲ್ಲಿ ಹೆಚ್ಚಾಗಿ ಸೌರಮಾನ ಯುಗಾದಿ ಆಚರಣೆ ಕಂಡುಬರುತ್ತದೆ. ಕುಂದಾಪುರದ ಕಡೆ ಇದನ್ನು ಆರೂಡ್ ಹಬ್ಬ ಎಂದೂ ಕರೆಯುತ್ತಾರೆ.

ಮನೆಗಳನ್ನು ತಳಿರು ತೋರಣಗಳಿಂದ ಶೃಂಗರಿಸಿ, ಹೊಸ ಬಟ್ಟೆ ತೊಟ್ಟು ಸಂಭ್ರಮಿಸುತ್ತಾ ಯುಗಾದಿಯಂದು ಹೊಸ ಪಂಚಾಂಗವನ್ನು ಓದುವ ಸಂಪ್ರದಾಯವೂ ಇದೆ. ಪಂಚಾಂಗ ಕೇಳುವುದರಿಂದ ಮಾನವನ ಆಯುಷ್ಯ ಹೆಚ್ಚಾಗುತ್ತದೆ ಮತ್ತು ರೋಗ ಪಾಪಗಳು ನಾಶವಾಗಿ ಗಂಗಾ ಸ್ನಾನ ಮಾಡಿದ ಫಲ ಸಿಗುತ್ತದೆ ಎಂಬ ನಂಬಿಕೆ ಇದೆ. ಪಾಡ್ಯದ ಮರುದಿನ ಸಂಜೆ ಬಿದಿಗೆಯ ಚಂದ್ರದರ್ಶನ ಮಾಡುವ ಸಂಪ್ರದಾಯವೂ ಇದೆ.

ಸೋಮಕಾಸುರನೆಂಬ ರಾಕ್ಷಸನು ವೇದಗಳನ್ನು ಕದ್ದೊಯ್ದು ಸಾಗರದ ಆಳದಲ್ಲಿ ಮುಚ್ಚಿಟ್ಟಿದ್ದನಂತೆ. ಶ್ರೀಮನ್ನಾರಾಯಣನು ಮತ್ಸ್ಯಾವತಾರ ತಾಳಿ ಆ ವೇದಗಳನ್ನು ತಂದು ಬ್ರಹ್ಮದೇವನಿಗೆ ಕೊಟ್ಟನಂತೆ. ಅಂದಿನಿಂದ ಬ್ರಹ್ಮದೇವ ತನ್ನ ಸೃಷ್ಟಿ ಕಾರ್ಯ ಪ್ರಾರಂಭ ಮಾಡಿದನಂತೆ.

ಶ್ರೀರಾಮಚಂದ್ರನು ರಾವಣನ ಸಂಹಾರ ಮಾಡಿ, ಸೀತೆಯೊಂದಿಗೆ ಅಯೋಧ್ಯೆಗೆ ಹಿಂತಿರುಗಿ ಪಟ್ಟಾಭಿಷೇಕವಾದ ದಿನ ಯುಗಾದಿ ಎಂದೂ ಹೇಳಲಾಗುತ್ತದೆ.

ಯುಗಾದಿಯು ವಸಂತ ಋತುವನ್ನು ಸ್ವಾಗತಿಸುತ್ತದೆ.

ಎಲ್ಲರಿಗೂ ಯುಗಾದಿ ಹಬ್ಬದ ಶುಭಾಶಯಗಳು.

# ಮಾರ್ಜಾಲದ ಸೇಡು

ನಿನ್ನೆ ರಾತ್ರಿ ಹನ್ನೆರಡು ಗಂಟೆ ದಾಟಿತ್ತು. ಎಲ್ಲೆಡೆ ಗಂಭೀರ ಮೌನವು ಆವರಿಸಿತ್ತು. ನಾನೊಬ್ಬನೇ ಸೋಫಾದಲ್ಲಿ ಕುಳಿತುಕೊಂಡು ಇತ್ತೀಚೆಗೆ ಬಿಡುಗಡೆಯಾದ ರೋಚಕ ಕೃತಿ "ಶಿರಾಢಿ ಘಾಟ್" ಪುಸ್ತಕದೊಳಗೆ ಇಳಿದಿದ್ದೆ. ಆಗ ಇದ್ದಕ್ಕಿದ್ದಂತೆ ನಮ್ಮ ಫ್ಲಾಟ್ ಹೊರಗೆ "ವ್ರಾಂವ್...ವಾಂವ್!" ಎಂಬ ತೀವ್ರವಾದ ಕಿರುಚಾಟ ಕೇಳಿ ಒಮ್ಮೆ ನನ್ನೆದೆ ನಡುಗಿತು. ಅದೇ ಧ್ವನಿ ಇನ್ನೊಮ್ಮೆ ಕೇಳಲು ಅದೊಂದು ಮಾರ್ಮಲೆತ ಮಾರ್ಜಾಲಗಳ ಕಾದಾಟವೆಂದರಿತೆ. ಇನ್ನಿಲ್ಲದ ಧೈರ್ಯವನ್ನು ತಂದುಕೊಂಡು ಮೂಲೆಯಲ್ಲಿದ್ದ ಪೊರಕೆಯೆಂಬ ದಿವ್ಯಾಸ್ತ್ರವನಾಂತು ಮೆಲ್ಲಗೆ ನಮ್ಮ ಗೃಹದ ಮುಖ್ಯದ್ವಾರವನ್ನು ತೆರೆದು ಹೊರಗೆ ಹೋಗಿ ಅಬ್ಬರ ಧ್ವನಿಯಲ್ಲಿ ಹೂಂಕರಿಸಿದೆ.

ಮಾರ್ಜಾಲದ್ವಯಗಳು ಎದುರುಮನೆಯವರು ಹೊರಗಿಟ್ಟಿದ್ದ ವೇಸ್ಟ್‌ಬಿನ್ ಕೆಡವಿ ಅದರಲ್ಲಿದ್ದ ಸುವಾಸನೆಭರಿತ ಮಾಂಸ ಭಕ್ಷ್ಯದ ಶೇಷವನ್ನು ಕೆದಕಿ ಮೃಷ್ಟಾನ್ನದಂತೆ ಮೆಲ್ಲುವುದಕ್ಕೆ ಪೈಪೋಟಿಗೈಯುತ್ತಿದ್ದವು. ಆದರೆ ಅದರ ಸುವಾಸನೆ ನನಗೆ ಗಬ್ಬು ವಾಸನೆಯಾಗಿತ್ತು. ನಾನು ಪೊರಕೆಯನ್ನು ಕಠಾರಿಯಂತೆ ಬೀಸುತ್ತಾ ಮುಂದೊತ್ತಿದೆ. ನನ್ನ ವೀರಾವೇಶಕ್ಕೆ ಕ್ಷಣಕಾಲ ಕಂಪಿಸಿದ ಆ ಮಲೆತ ಬೆಕ್ಕುಗಳು ನನ್ನನ್ನೊಮ್ಮೆ ಕಣ್ಣೆತ್ತಿ ಕೆಕ್ಕರಿಸಿ ನೋಡಿ ಅದರ ಬಾಯಿಗೆ ಅಡ್ಡವಾಗಿ ಬಂದ ನನಗೆ ಹಿಡಿಶಾಪ ಹಾಕುತ್ತಾ ಎಲ್ಲೋ ಓಡಿ ಮರೆಯಾದವು. ನಾನು ಆ ವೇಸ್ಟ್ ಬಿನ್ ಮೇಲೆ ಭಾರವಾದ ವಸ್ತುವನ್ನಿಟ್ಟು ಮನೆ ಸೇರಿ ಮಲಗಿದೆ.

ಬೆಳಿಗ್ಗೆ ಆರೂವರೆ ಗಂಟೆಯಾಗಿರಬಹುದು. ನನ್ನ ಹೆಂಡತಿ "ರೀ....ರೀ..." ಎಂದು ಆರ್ತನಾದಗೈಯುವುದು ಕೇಳಿ ನನ್ನ ಗಾಢನಿದ್ರೆ ಎಗರಿ ಹೋಯಿತು. ಏನಾಯ್ತಪ್ಪಾ, ಎಂದು ಕಣ್ಣುಜ್ಜಿಕೊಳ್ಳುತ್ತಾ ಹೊರಗೆ ಧಾವಿಸಿದೆ. ನನ್ನ ಹೆಂಡತಿ ದಿಗ್ಭ್ರಾಂತಳಾಗಿ ನಿಂತಿದ್ದಳು. ಅವಳ ಕೈಯಲ್ಲಿದ್ದ ಎರಡು ಅರ್ಧ ಲೀಟರಿನ ನಂದಿನಿ ಹಾಲಿನ ಪ್ಯಾಕೆಟ್ ಪೂರ್ತಿ ಖಾಲಿಯಾಗಿತ್ತು. ಮನೆಯ ಮುಂದಿದ್ದ ಚಪ್ಪಲಿಗಳಿಗೆ ಕ್ಷೀರಾಭಿಷೇಕವಾಗಿತ್ತು. ಚಪ್ಪಲಿ ಸ್ಟಾಂಡಿನ ಮೇಲಿಟ್ಟಿದ್ದ ನಂದಿನಿ ಹಾಲಿನ ಪ್ಯಾಕೆಟ್ ಹಾಕುವ ಡಬ್ಬಾದ ಮುಚ್ಚಳ ಎಗರಿತ್ತು. ಡಬ್ಬ ಅಡಿಮೇಲಾಗಿತ್ತು. ದೂರದಲ್ಲಿ ಅದೇ ಎರಡು ಮಾರ್ಜಾಲಗಳು ನನ್ನನ್ನು ನೋಡಿ ಹಾಲಿನಿಂದ ಮಿಂದಿರುವ ಮೀಸೆಗಳನ್ನು ಕುಣಿಸುತ್ತಾ "ಲೋ ಪಾಪಿ! ನಿನ್ನೆ ರಾತ್ರಿ ನಮ್ಮ ಊಟಕ್ಕೆ ಕಲ್ಲು ಹಾಕಿದ ನಿನ್ನ ಕುಕೃತ್ಯಕ್ಕೆ ಹೀಗೆ ಮುಯ್ಯಿ ತೀರಿಸಿದ್ದೇವೆ. ನಮ್ಮ ತಂಟೆಗೆ ಬಂದರೆ ನಾವು ಬಿಡುವುದಿಲ್ಲ. ಹುಷಾರ್!" ಎಂದು ನನ್ನನ್ನು ಎಚ್ಚರಿಸಿ ಓಡಿ ಮರೆಯಾದವು. ಬೆಳಿಗ್ಗೆ ಆರು ಗಂಟೆಗೆ ಹಾಲಿನವನು ಹಾಲಿನ ಪ್ಯಾಕೆಟ್ ಹಾಕಿ ಹೋದ ತಕ್ಷಣ ಆ ಮದಿಸಿದ ಬೆಕ್ಕುಗಳ ಜೋಡಿ ನಮ್ಮ ಮನೆಯ ಹಾಲಿನ ಡಬ್ಬಾದ ಮುಚ್ಚಳವನ್ನು ಛೇದಿಸಿ ಹಾಲನ್ನು ಕುಡಿದು ಮಾರ್ಮೊಳೆದಿತ್ತು.

ನಮ್ಮ ಅಪಾರ್ಟ್ಮೆಂಟಿನಲ್ಲಿ ಬೆಕ್ಕುಗಳ ಕಾಟವಿರುವ ಕಾರಣ ನಾವು ಪ್ಲಾಸ್ಟಿಕ್ ಡಬ್ಬದೊಳಗೆ ಹಾಲಿನ ಪ್ಯಾಕೆಟ್ ಇಡುವುದಕ್ಕೆ ವ್ಯವಸ್ಥೆ ಮಾಡಿದ್ದು. ಆದರೆ ಹಿಂದೆಂದೂ ಬೆಕ್ಕು ಡಬ್ಬದ ತಂಟೆಗೆ ಬಂದದ್ದಿಲ್ಲ. ಅಂದರೆ ಇಂದು ಆ ಬೆಕ್ಕುಗಳ ಜೋಡಿ ನನ್ನ ಮೇಲೆ ಹೀಗೆ ಸೇಡು ತೀರಿಸಿಕೊಂಡಿತ್ತು!



ರಮೇಶ್ ಶೆಟ್ಟಿಗಾರ್ ಮಂಜೇಶ್ವರ
ಸುಂದರ್‌ರಾಮ್ ಶೆಟ್ಟಿ ನಗರ,
ಬೆಂಗಳೂರು



AI generated image: No photo credits required



AI generated image: No photo credits required

# ಷೋ ಮಿ ದ ರಿಸಲ್ಟ್!

"ಡು ವಾಟೆಹ್ವರ್ ಯು ವಾಂಟ್. ಐ ವಾಂಟ್ ಟು ಸಿ 50% ಇನ್ಕ್ರೀಸ್ ಇನ್ Q3 ಸೇಲ್ಸ್ ಫಿಗರ್ಸ್" ಎಂದು **ಎಮ್.ಸಿ. ದೇಶಪಾಂಡೆ** ತನ್ನ ಎಮ್.ಸಿ.ಡಿ ಕಂಪೆನಿಯ ಸೇಲ್ಸ್ ಹೆಡ್ **ಓ.ಸಿ ಅಗರ್ವಾಲ್ಗೆ** ತುಪುಕ್ ಅಂತ ಉಗಿದು ಕಳಿಸುತ್ತಾನೆ.

ಅರ್ಧಗಾಳಿ ಹೋದ ಪುಗ್ಗದ ಹಾಗೆ ಜೋತುಬಿದ್ದ ಮುಖದೊಂದಿಗೆ ಅಗರ್ವಾಲನು ಎಮ್.ಡಿ ಯ ಕ್ಯಾಬಿನ್ ನಿಂದ ಹೊರಹೋಗಲು ಬಾಗಿಲನ್ನು ತೆಗೆಯುತ್ತಿದ್ದಂತೆ ಮೌಂಟ್ ಎವರೆಸ್ಟ್ ಬೆಟ್ಟವನ್ನೇ ಅಲ್ಲಾಡಿಸಿ ಬಂದ ಹಾಗೆ ಊಸರವಳ್ಳಿಯಂತೆ ಮುಖದ ಎಕ್ಸ್ ಪ್ರೆಷನ್ನನ್ನು ಬದಲಾಯಿಸಿಕೊಳ್ಳುತ್ತ ತನ್ನ ಏಪ್ಯಾಕ್ ಟೀಮ್ನ ಕಡೆಗೆ ಹೆಜ್ಜೆ ಇಡುತ್ತಾನೆ.

ಏಪ್ಯಾಕ್ ಟೀಮ್ ಕ್ಯೂಬಿಕಲ್ನಲ್ಲಿ **ಎಸ್.ಎಮ್. ಇಂದಿರ**ಳೊಂದಿಗೆ ಫ್ಲರ್ಟ್ ಮಾಡುತ್ತ ಕಂಪ್ಯೂಟರ್ ಡೆಸ್ಕ್ ಮೇಲೆ ಕುಳಿತು ಎಂ.ಡಿಯ ಕ್ಯಾಬಿನ್ ಕಡೆಗೆ ಆಗಾಗ ಕಣ್ಣಾಡಿಸುತ್ತಿದ್ದ **ಆರ್. ಸಿ. ಕೃಷ್ಣ**ನು ತನ್ನ ಬಾಸ್ನ ಗೆಲುವಿನ ಮುಖ ನೋಡಿ "ಒಳ್ಳೆ ಅಪ್ರಿಷಿಯೇಷನ್ ಸಿಕ್ಕಿರ್ಬೇಕು. ಈ ಸಲ ನನ್ನ ಸಂಬಳದಲ್ಲಿ 50% ಹೈಕ್ ಪಕ್ಕಾ" ಎಂದು ಮನಸ್ಸಿನಲ್ಲಿಯೇ ಖುಷಿಪಡುತ್ತಾನೆ. ಅಗರ್ವಾಲನು ಕ್ಯೂಬಿಕಲ್ ಕಡೆಗೆ ಬರುತ್ತಿದ್ದಂತೆ ಕೃಷ್ಣನು "ಓ.ಸಿ ಬಂದ" ಎಂದು ಇಂದಿರಗೆ ಕೇಳಿಸುವ ಹಾಗೆ ಗೊಣಗುತ್ತ ತನ್ನ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾನೆ.

**ಅಗರ್ವಾಲ್:** ಗೈಸ್! ಎನಿ ಪ್ಲಾನ್ಸ್ ಫಾರ್ ಡಿನ್ನರ್ ಟುನೈಟ್? ಷಲ್ ವಿ ಗೊ ಟು ರಾಷ್ಟ್ರಕೂಟಾಸ್ ಆಂಡ್ ಹಾವ್ ದೊಣ್ಣೆ ಬಿರಿಯಾನಿ?

**ಕೃಷ್ಣ:** ಬಾಸ್! ಇಟ್ಸ್ ನಾಟ್ ದೊಣ್ಣೆ ಬಿರಿಯಾನಿ. ಇಟ್ ಇಸ್ ದೊನ್ನೆ ಬಿರಿಯಾನಿ.

ಮನಸ್ಸಿನಲ್ಲಿ ಅಗರ್ವಾಲನು "ನಿನಗೆ ಇದೆ ಇವತ್ತು. ಬಿರಿಯಾನಿ ಜೊತೆಗೆ ಬೀಸ್ತಿನಿ. ಆವಾಗ ಗೊತ್ತಾಗುತ್ತೆ ದೊಣ್ಣೆನ ಅಥವಾ ದೊನ್ನೆನಾ ಅಂತ"

**ಇಂದಿರ:** ಶೂರ್ ಸರ್. ಐ ಆಮ್ ಇನ್. ವೈ ಕಾಂಟ್ ವಿ ಟ್ರೈ 'ಗಿರ್ಗಿಟ್' ನಿಯರ್ ಥರ್ಡ್ ಮೈನ್ ರೋಡ್. ವಿ ಕ್ಯಾನ್ ಹಾವ್ ಸಮ್ ಡ್ರಿಂಕ್ಸ್.

ಅಷ್ಟರಲ್ಲಿ ಎಮ್.ಸಿ. ದೇಶಪಾಂಡೆ ತನ್ನ ಕ್ಯಾಬಿನ್ ಬಾಗಿಲನ್ನು ತೆಗೆದು ಮನೆಗೆ ತೆರಳುತ್ತಾನೆ. ಇದನ್ನು ಗಮನಿಸಿದ ಅಗರ್ವಾಲನು.

**ಅಗರ್ವಾಲ್:** ಎಸ್. ದ್ಯಾಟ್ ಸೌಂಡ್ಸ್ ಬೆಟ್ಟರ್. ಲೆಟ್ಸ್ ಕ್ಯಾಚಪ್ ಎಟ್ 8pm ನಿಯರ್ 3ರ್ಡ್ ಮೈನ್ ರೋಡ್. ಸಿ.ಯು ಬೋತ್!

ಅಗರ್ವಾಲನು ತನ್ನ ಲಾಪ್ ಟಾಪ್, ಚಾರ್ಜರ್ ಅನ್ನು ಬ್ಯಾಗ್ನಲ್ಲಿ ಹಾಕಿಕೊಂಡು ಮನೆಗೆ ಹೊರಡುತ್ತಾನೆ. ಇವನು ಹೋಗುತ್ತಿದ್ದಂತೆ 5-10 ನಿಮಿಷದಲ್ಲಿ ಕೃಷ್ಣ ಹಾಗೂ ಇಂದಿರ ಹೊರಡುತ್ತಾರೆ.

**ಕೃಷ್ಣ:** ಇಫ್ ಯು ಡೊಂಟ್ ಮೈಂಡ್, ಬರ್ತಿಯಾ. ಮನೆಗೆ ಡ್ರಪ್ ಮಾಡ್ತಿನಿ. ಆಸ್ ಯು ನೋ, ಐ ಆಲ್ವೇಸ್ ಕ್ಯಾರಿ ಟು ಹೆಲ್ಮೆಟ್ಸ್!

**ಇಂದಿರ:** ಶುರ್. ವೈನಾಟ್. ನಿಮ್ ಬೈಕ್ ಅಲ್ಲಿ ಹೋಗೊದೆ ಒಂದು ಮಜಾ!

ಬೆಂಗಳೂರಿನ ಟ್ರಾಫಿಕ್ಗೆ ಬೈಯುತ್ತ, ಆಗಾಗ ಬ್ರೇಕ್ ಹಾಕುತ್ತ, ಬಾಸ್ ಬಗ್ಗೆ ಕಂಪನಿ ಬಗ್ಗೆ ಮಾತಾಡುತ್ತ ಹೋಗುತ್ತಾರೆ. ಇಂದಿರಳ ಮನೆ ಹತ್ತಿರ ಬರುತ್ತಿದ್ದಂತೆ...

**ಇಂದಿರ:** ಕೃಷ್ಣ. ಇಲ್ಲಿಯೆ ನಿಲ್ಲಿಸಿ. ಐ ವಾಂಟ್ ಟು ಬೈ ಸಮ್ ಸ್ಟಫ್ಸ್ ಫಾರ್ ಹೋಮ್.

**ಕೃಷ್ಣ:** ಶೂರ್.

ತನ್ನ ಮನೆಯಿಂದ ಅರ್ಧ ಕಿ.ಮಿ. ದೂರದಲ್ಲಿಯೇ ಬೈಕ್ ನಿಂದ ಇಳಿದು, ಕೃಷ್ಣನಿಗೆ ಹೆಲ್ಮೆಟ್ ವಾಪಸ್ ಕೊಟ್ಟು, ಬಾಯ್ ಎಂದು ನಡೆಯುತ್ತ ಮನೆ ಕಡೆಗೆ ಹೆಜ್ಜೆ ಇಡುತ್ತಾಳೆ.

**ಕೃಷ್ಣ:** ಸೀಯು ಅಟ್ 8. ಬಾಯ್!

ಎಂದು ನಿಂಜಾ ಬೈಕ್ನ ಆಕ್ಸೆಲರೇಟರ್ ಜೋರಾಗಿ ಕೊಡುತ್ತಾ, ಸೈಲೆನ್ಸರ್ ನಿಂದ ಶಬ್ದ ಮಾಡುತ್ತ ಹೊರಡುತ್ತಾನೆ.

ಇಂದಿರಳು ವ್ಯಾನಿಟಿ ಬ್ಯಾಗ್ನಿಂದ ಇಯರ್ ಪಾಡ್ಸ್ ಅನ್ನು ಕಿವಿಯಲ್ಲಿ ಹಾಕಿ, ತನ್ನ ಐ ಫೋನ್ ನಿಂದ 'ja...' ಎಂದು ಟೈಪ್ ಮಾಡುತ್ತಾಳೆ. 'ಜಾಕ್ ಡಿ.' ಹೆಸರು ಕಾಣಿಸುತ್ತಿದಂತೆ ಹೆಸರಿನ ಮೇಲೆ ಒತ್ತಿ ಜಾಕ್ಗೆ ಕರೆ ಮಾಡಿ ಫೋನ್ ಅನ್ನು ಬ್ಯಾಗಿನಲ್ಲಿ ಇಟ್ಟು ನಡೆಯುತ್ತಾಳೆ.

**ಇಂದಿರ:** ಹು.......... ಎಸ್........... ವಾಟ್ ಆರ್ ಯು ಡೂಯಿಂಗ್!........ ಹ್ಞ್........ ಒಕೆ ಒಕೆ... ಟುಕ್ ಓಲಾ........... ಹ್........ ಯಾ........ ನೋ..... ಇಟ್ ವಾಸ್ ಎಸ್ಟರ್ ಡೇ............ ಹ ಹಾ... ಗ್ರೀನ್.............ಒಕೆ...... ಐ ಆಮ್ ನಿಯರಿಂಗ್ ಟು ಹೋಮ್......ಡ್ಯಾಡ್ ಈಸ್ ಔಟ್ ಸೈಡ್. ಸೀ ಯು... ಬಾಯ್.

ಇಂದಿರಳ ಅಪ್ಪ **ಪುಂಗಿ ಜಾನ್** ಮನೆಯ ಅಂಗಳದಲ್ಲಿರುವ ಗಿಡಗಳಿಗೆ ನೀರುಣಿಸುತ್ತ...

**ಪಿ.ಜೆ:** ಏನ್ ಬೆಂಗಳೂರೋ ಏನೋ ಗೊತ್ತಿಲ್ಲ. ಅಪ್ಪನ ದುಡ್ಡಲ್ಲಿ ಇಂಪೋರ್ಟೆಡ್ ಬೈಕ್ ತಗೋಳೋದು. ಝುರ್........ ಅಂತ ಸೌಂಡ್ ಮಾಡ್ಕೊಂಡ್ ಜನರಿಗೆಲ್ಲ ತೊಂದರೆ ಕೊಡೊದು. ಯಾವಾಗ್ ಉದ್ಧಾರ ಆಗ್ತಾರೋ. R.T.O ದವರಿಗಾದ್ರು ಬುದ್ಧಿ ಬೇಡ್ವಾ... ಇಂತಾ ಬೈಕ್ ಗೆಲ್ಲಾ ಹೇಗೆ ಅಪ್ರೋವಲ್ ಕೊಡ್ತಾರೆ! ಡಿಸ್ಗಸ್ಟಿಂಗ್!

ಇಂದಿರ ಮನೆ ಒಳಗೆ ಹೆಜ್ಜೆ ಇಡುತ್ತಿರುವಾಗ ಪಕ್ಕದ ಮನೆಯ ಅಮೃತ ಗ್ಯಾಲರಿ ಇಂದ ಹೊರಗೆ ಬರುತ್ತಾಳೆ. ಇದನ್ನು ಗಮನಿಸಿದ ಪಿ.ಜೆ "ಏನ್ರೀ ಅಮೃತ ಅವ್ರೆ. ವೇರ್ ಇಸ್ ಶಿವು. ಮನೇಲಿದ್ದಾರ ಅಥವಾ ಕುದ್ರೆ ಹಿಂದೆ ಹೋಗಿದ್ದಾರಾ? ರಾತ್ರಿ ನಮ್ ಮನೆಗೆ ಊಟಕ್ಕೆ ಬನ್ನಿ. ಶಿವು ಜೊತೆ ಇಂಪಾರ್ಟೆಂಟ್ ಟಾಪಿಕ್ ಬಗ್ಗೆ ಡಿಸ್ಕಶನ್ ಮಾಡ್ಬೇಕು.

**ಅಮೃತ:** ಆಯಿತು. ಅವರಿಗೆ ಹೇಳ್ತಿನಿ. ಏನ್ ಸ್ಪೆಷಲ್ ಮಾಡಿದ್ದಾರೆ ಮಿಸ್ಸೆಸ್ ಪಿ.ಜೆ ಯವರು?

**ಪಿ.ಜೆ:** ಅದೇನೋ ಗೊತ್ತಿಲ್ಲ ನೀವೇ ಕೇಳ್ಕೊಳಿ.

ಮನೆ ಒಳಗಿಂದ ಇಂದಿರ ಅಮ್ಮನಿಗೆ "ಅಪ್ಪ ಅವರ್ ಡೌವ್ ಜೊತೆ ಏನೋ ಪುಂಗ್ತವರೆ. ರಾತ್ರಿ ಕರ್ದಿದ್ದಾರೆ! ಊಟಕ್ಕೆ! ಜೊತೆಗೆ ಅಂಕಲ್ ಇಲ್ಲಪ್ಪ ಅವರನ್ನು ಕರ್ಕೊಂಡ್ ಬರಬೇಕಂತೆ ಅಂತ ಹೇಳ್ತಿದ್ದಾರೆ"

**ಮಿಸೆಸ್.ಪಿ.ಜೆ:** ನನ್ ಜೀವ್ನ ಪೂರ್ತಿ ಇದೇ ಆಯಿತು. ಯಾರ್ ಯಾರ್ನೋ ಮನೆಗೆ ಕರ್ಕೊಂಡು ಅಡುಗೆ ಮಾಡಿ ಹಾಕೋದು. ಇವ್ರು ಕುಡ್ಕೊಂಡು ಕೈ, ತಾವರೆ, ದಳ ಅಂತ ದೇಶ ಉದ್ದಾರ ಮಾಡೋ ಹಾಗೆ ಮಾತಾಡೋದು.

**ಇಂದಿರ:** ಅಮ್ಮ. ಆಫೀಸ್ ಅಲ್ಲಿ ಬಾಸ್ ಡಿನ್ನರ್ ಗೆ ಕರ್ದಿದ್ದಾರೆ. ನನಗೆ ಏನು ಮಾಡಿಡ್ಬೇಡ.

**ಮಿಸೆಸ್.ಪಿ.ಜೆ:** ಹೋಗು! ನೀನು ಹೋಗ್ಬಿಡು. ನನ್ ಕೇಳೋರು ಯಾರು ಇಲ್ಲ.

ಮನೆಯಲ್ಲಿ ಜೂಟಾಟ ನಡಿತ್ತಿದ್ದ ಹಾಗೆ ಪಿ.ಜೆ ಕಿಚನ್ನ crockery unit ಇಂದ ಒಂದು ಫುಲ್ ಎಂ.ಸಿ.ಡಿ ಬಾಟಲ್ ತೆಗದು ಒರಸಿ ಡೈನಿಂಗ್ ಟೇಬಲ್ ಮೇಲೆ ಇಡುತ್ತಾನೆ. ಸಂಜೆ 7:30 ಆಗ್ತಿದ್ದಾಗೆ, ಇಂದಿರಾ 'ಗಿರ್ಗಿಟ್' ಕಡೆಗೆ ಓಲ ಬುಕ್ ಮಾಡಿ ಹೊರಡುತ್ತಾಳೆ. ದಾರಿ ಅಲ್ಲಿ ಹೋಗುತ್ತ ಅದೇ ರಾಗ ಅದೇ ತಾಳ... ಹು...... ಮ್... ಹಾ... ಯಾ....... ರೆಡ್...... ಯಾ ಯಾ ... ಹೂಂ.......... ಹ್.. ಓಕೆ.. ಬಾಯ್.

ಗಿರ್ಗಿಟ್ ನಲ್ಲಿ ಕೃಷ್ಣ ಹಾಗು ಅಗರ್ವಾಲ್ ಇಬ್ಬರು ಒಂದ್ ಟೇಬಲ್ ನಲ್ಲಿ ಕುಳಿತು ಒಂದೊಂದು ಲಾರ್ಜ್ ಪಾ.ಜಾ ಸಿಂಗಲ್ ಮಾಲ್ಟ್ ಆರ್ಡರ್ ಮಾಡಿ ಫಿಂಗರ್ ಚಿಪ್ಸ್ ಅನ್ನು ಮದ್ಯದ ಮಧ್ಯ ತಿನ್ನುತ್ತಾ ಮಾತನಾಡುತ್ತಿರುವಾಗ ಇಂದಿರ ಬರುತ್ತಾಳೆ. ಇಂದಿರ ತನಗೆ ಒಂದು LIIT ಮತ್ತು ಚೀಸ್ ಬಾಲ್ಸ್ ಆರ್ಡರ್ ಮಾಡಿ ಎಲ್ಲರೂ ಮಾತಿಗೆ ಇಳಿಯುತ್ತಾರೆ. ಎರಡೆರಡು ಪೆಗ್ ಒಳಗೆ ಹೋದ ನಂತರ...

**ಅಗರ್ವಾಲ್:** ಗೈಸ್. ಐ ಗಾಟ್ ಫಿವ್ ಇಂಪಾರ್ಟೆಂಟ್ ಅಪ್ಡೇಟ್ಸ್ ಫಾರ್ ಯು ಬೋತ್. ಎಂ.ಡಿ ನಮ್ಮ ಸೇಲ್ಸ್ ಟಾರ್ಗೆಟ್ ಅನ್ನು Q3 ಯಲ್ಲಿ ಡಬಲ್ ಮಾಡಿದ್ದಾರೆ. ಇಟ್ಸ್ ನವ್ 100% ಮೊರ್ ವಿ ಹಾವ್ ಟು ವರ್ಕ್. ನಮ್ಮ ಫ್ಲಾಗ್ಷಿಪ್ ಪ್ರಾಡಕ್ಟ್ McD ನ ಜನ ಡಬಲ್ ಕುಡಿಬೇಕು. ಆಗ ವೀ ವಿಲ್ ರೀಚ್ ಅವರ್ ಟಾರ್ಗೆಟ್.

ಅಗರ್ವಾಲನ ದೊಣ್ಣೆ ಏಟಿಗೆ ಕೃಷ್ಣನ ನಶೆ 50% ಇಳಿಯುತ್ತಿದ್ದಂತೆ....

**ಅಗರ್ವಾಲ್**: ಈ ವರ್ಷ ನೀವ್ ಇಬ್ಬರು ಹೈಕ್ ಎಕ್ಸ್ ಪೆಕ್ಟ್ ಮಾಡ್ಬೇಡಿ. ಆಸ್ ಯು ನೊ ದೇಶದ ಇನ್ಫ್ಲೇಷನ್ ರೇಟ್ ಇಸ್ ಅಟ್ 6.8%. ಇನ್ ದಿಸ್ ಸಿನಾರಿಯೋ ವಿ ಡೊಂಟ್ ಗೇಟ್ ಹೈಕ್. ಬಟ್ ಐ ಹ್ಯಾವ್ ಕಾನ್ವಿಂಸ್ಡ್ MD ಟು ಗಿವ್ ಯು ಬೋತ್ ಅಟ್ಲೀಸ್ಟ್ ಎ ಫ್ಲಾಟ್ ಹೈಕ್. ದಟ್ ಇಸ್ ಅರೌಂಡ್ 3-4%.

**ಇಂದಿರ**: ಇಟ್ಸ್ ಓಕೆ ಸರ್! ನೀವು ಹೈಕ್ ಹೇಳ್ತಿದ್ದಾಗೆ ನೆನಪಿಗೆ ಬಂತು. ಶಲ್ ವಿ ಗೋ ಫಾರ್ ಕುದ್ರೆಮುಖ ಹೈಕಿಂಗ್ ದಿಸ್ ವೀಕೆಂಡ್? ಮೈ ಫ್ರೆಂಡ್ ಜಾಕ್ ಆರ್ಗನೈಸಸ್ ದೀಸ್ ಕೈಂಡ್ಸ್ ಆಫ್ ಆಕ್ಟಿವಿಟೀಸ್. ಐ ವಿಲ್ ಟಾಕ್ ಟು ಹಿಮ್ ಇಫ್ ಯು ಬೋತ್ ಆರ್ ಇಂಟರೆಸ್ಟೆಡ್.

ಕೃಷ್ಣ ಮನಸ್ಸಲ್ಲಿ ತನ್ನೊಳಗೆ "ಇಲ್ಲಿ ಪೆಟ್ರೋಲ್ ಹಾಕಕ್ಕೇ ದುಡ್ಡಿಲ್ಲ ಅಂತ ನಾನ್ ಚಿಂತೆ ಮಾಡ್ತಿದ್ರೆ ಹೈಕಿಂಗ್ ಅಂತೆ. ಅದ್ಬೇರೆ ಯಾವನೊ ಜೊತೆ ಇವಳು ನಮ್ಮಾ ಕರ್ಕೊಂಡ್ ಹೊಗ್ತಾಳಂತೆ. ಇದ್ರ ಬದ್ಲು ಹೆಂಡ್ತಿ ಜೊತೆ ತಿಮ್ಮಪ್ಪನ ದರ್ಶನ ಮಾಡಿದ್ರೆ ಅವ್ನ ಆಶೀರ್ವಾದದಿಂದ ಬೇರೆ ಕಡೆ ಕೆಲಸ ಆದ್ರೂ ಹುಡ್ಕಬಹುದು"

**ಅಗರ್ವಾಲ್:** ಷಲ್ ವಿ ಗಿವ್ ಅವರ್ ಬೆಸ್ಟ್ ದಿಸ್ ಕ್ವಾರ್ಟರ್ ಗೈಸ್?

ಕೃಷ್ಣ ಮತ್ತೆ ಮನಸ್ಸಿನಲ್ಲಿ "ಲೇ. ಓಸಿ ನನ್ನ ಮಗನೇ. ನೆಟ್ಟಗೆ ಕನ್ನಡ ಮಾತಾಡೊ ಗುಬಾಲ್! ಕ.ಹೋ.ಸ ನ ಕರ್ಕೊಂಡ್ ಬಂದ್ ಆಫೀಸ್ನೆಲ್ಲ ಒಡ್ದಾಹಾಕ್ ಬೇಕು." ಅಗರ್ವಾಲ್ ಗೆ ಬೈಯ್ಯುತ್ತಿರುತ್ತಾನೆ. ಅಷ್ಟರಲ್ಲಿ ಮತ್ತೆ...

**ಅಗರ್ವಾಲ್:** "ಐ ನೋ ಕೃಷ್ಣ ಹ್ಯಾಸ್ ಬೀನ್ ಡೂಯಿಂಗ್ ಗ್ರೇಟ್ ಜಾಬ್. ಹೀ ಹ್ಯಾಸ್ ಬೀನ್ ಆಲ್ವೇಸ್ ಎ ಗ್ರೇಟ್ ಸೇಲ್ಸ್ ಮ್ಯಾನ್ ಇನ್ ದಿಸ್ ಇಂಡಸ್ಟ್ರೀ. ಲಕ್ಕಿ ದಟ್ ಯು ಆರ್ ವಿದ್ ಮಿ ಕೃಷ್ಣ. ಥೀಯರ್ಸ್ ಅಗೈನ್.

**ಕೃಷ್ಣ** (ಮುಗುಳ್ನಗುತ್ತ): ತಾಂಕ್ಸ್ ಬಾಸ್! ಯು ಹಾವ್ ಬೀನ್ ದ ಬೆಸ್ಟ್ ಬಾಸ್ ಎವರ್!

**ಅಗರ್ವಾಲ್:** ಆಲ್ಸೋ ಯು, ಇಂದಿರಾ. ಯು ಶುಡ್ ಫೋಕಸ್ ಆನ್ ಓ.ಸಿ. ಇನ್ ನೆಕ್ಸ್ಟ್ ಕ್ವಾರ್ಟರ್. ಲೆಟ್ಸ್ ಚೇಂಜ್ ದಿ ನಂಬರ್ಸ್ ದಿಸ್ ಟೈಮ್. ಚೀಯರ್ಸ್ ಟು ಅಸ್! ಟುಡೇಸ್ ಫುಡ್ ಆಂಡ್ ಡ್ರಿಂಕ್ಸ್ ಇಸ್ ಆನ್ ಮಿ. ಡೋಂಟ್ ವರಿ. ಮೇಕ್ ಇಟ್ ಲಾರ್ಜ್! ***ಖೂಬ್ ಜಮೇಗ ರಂಗ್ ಜಬ್ ಮಿಲ್ ಬೈಟೆಂಗೆ ತೀನ್ ಯಾರ್! ಆಪ್, ಮೆ, ಔರ್ 4th ಕ್ವಾರ್ಟರ್.***



ಯಶಸ್ವಿ. ಜೆ, ಜ್ಞಾನಭಾರತಿ
ಬೆಂಗಳೂರು



AI generated image: No photo credits required

# ಕೋಳಿ ಅಂಕದಲಿ ನಾನೊಂದು ದಿನ

ಅಂಕದ ಅಹಂ ಕೋಳಿ ರೆಕ್ಕೆ ಬಡಿದೆದ್ದು;
ಬಿಂಕದಲ್ಲಿ ಸೆಟೆದೆದ್ದು, ವೈರಾಂಗಣಕ್ಕೆ ಕಳೆ ಮೂಡಿರಲು;
ಟೊಂಕ ತ್ಯಾಂಪಣ್ಣನ ಕೋಮಣ್ಣದ ಸಂದುದುರಿ ಇಣುಕುತಿರಲು;
ಬೇರೇನೂ ಬೇಕೇ ಆರಂಭ ನಿಶಾನೆ ಹುರಿದುಂಬಲು!

ಮೋಜಿಗೇನು ಕಮ್ಮಿ ಈ ಅಂಕಣದಲ್ಲಿ!
ಬೀಡಬಾಯ ತೊದಲಲ್ಲೇ ಆಡಿದ್ದೇ ಭಾಷೆ!
ಭಾಷೆಯ ಉಚ್ಚ-ನೀಚ ಸವಿಯಬೇಕಿದ್ದರೆ,
ಬರಲೇಬೇಕಣ್ಣಾ ಈ ಅಖಾಡಕ್ಕೆ!

ಕೇಳಿಯೂ, ಕೇಳದಂತಿದ್ದರೆ ಅದೆಷ್ಟೋ ಕಾನೂನು,
ಸಲೀಸಾಗಿ ಜಾರಿಯಾಗುವುದು ಗುಂಪು-ಗದ್ದಲದಲಿ!
ಕೋಳಿಯ ಆರ್ತನಾದವಾದರೂ ಕೇಳುವವರಾರು - ಈ ಗೌಣ ಭಾಷೆಯಲಿ.

ತನ್ನ ಸ್ವಾಭಿಮಾನಕ್ಕೆ ಧಕ್ಕೆ ಬಂದರೆ, ತನ್ನ ತಾನೇ ರಕ್ತ ಹರಿಸಿ,
ಪೌರುಷವ ಮೆರೆಯುವುದದುವೇ ಸತ್ಯ!
ಹಿಂಸೆಯಲ್ಲೂ ಸಾರುವುದದುವೇ ಅಹಿಂಸೆಯನ್ನೆ!!

ಬರೇ ಕಾಲಹರಣವಲ್ಲ ಕಣೋ ಈ ತುಂಬುಗದ್ದಲ;
ತುಂಬು-ಜಾಣರು ವ್ಯವಹಾರ ಕುದುರಿಸುವವರಲ್ಲಲ್ಲೇ -
ಗೆದ್ದವರು - ಭೇಷ್ - ಬಿದ್ದು ಎದ್ದವರು;
ಸೋತವರು - ಗೆಲುವ ಆಶಯವೇ ಗೆಲುವೆಂದು ಓಲೈಸುವರು!



**ಎಕ್ಕಾರ್ ಡಿ. ಪಿ. ಶೆಟ್ಟಿಗಾರ್**
**ಶೇಷಾದ್ರಿಪುರಂ, ಬೆಂಗಳೂರು**



# ಕೊಡಚಾದ್ರಿ ಬೆಟ್ಟ

ಕೊಡಚಾದ್ರಿ ಬೆಟ್ಟದಲಿ
ಕಡಿದಾದ  ಹಾದಿಯಲಿ
ನಡೆಯಲಿದೆ ಬಲು ದೂರ ಬರುವಿರೇನು |
ನುಡಿಗೆ ನುಡಿ ಸೇರಿಸುತ
ಸಡಗರದಿ ಹಾಡಲಿದೆ
ಕಡೆ ತನಕವುಲ್ಲಾಸ ಕೊಡುವಿರೇನು ||

ತುಹಿನವೆಲ್ಲೆಡೆ ಹರಡಿ
ಪಹರೆ ಕಾದಂತಿಹುದು
ಕಹಳೆಯದೊ ಮೊಳಗಿಹುದು ಕಾನುವಲ್ಲಿ |
ವಿಹಿತವೆನಿಸುವ ನೋಟ
ವಿಹಗಗಳ ಕೊಂಡಾಟ
ಚಹರೆಯರಳಿಸಿ ಪಯಣ ಬೆಟ್ಟದಲ್ಲಿ ||

ಹಸಿರೆಲೆಯ ಸಿಹಿಮುತ್ತು
ರಸಕಾವ್ಯ ಬರೆದಿತ್ತು
ತುಸು ನಾಚಿ ನಕ್ಕಿಹವು ತರುಲತೆಗಳು |
ಅಸದಳವು ವರ್ಣಿಸಲು
ಕಸರತ್ತು ನಡೆಸುತಿವೆ
ಬೆಸೆದು ಬಾಂಧವ್ಯವನು ಖಗಮೃಗಗಳು ||

ಬರುವಿರಾದರೆ ಬನ್ನಿ
ಮಿರುಗುತಿದೆ ಮೆರೆಯುತಿದೆ
ಕರೆಯುತಿದೆ ನೋಡಿರೋ ಕೊಡಚಾದ್ರಿಯು |
ಸುರರಿಳಿದು ಬಂದಂತೆ
ಧರೆಯಲ್ಲಿ ಸಂಭ್ರಮವೊ
ದೊರೆಯಂತೆ ಕಂಗೊಳಿಪ ಕೊಡಚಾದ್ರಿಯು ||



**ಶೋಭಾ ಹರಿಪ್ರಸಾದ ಶೆಟ್ಟಿಗಾರ**
**ಉಡುಪಿ**

AI generated image: No photo credits required

# ಹೊಸದೇನಿದೆ?

ಹಳೆಯ ಗೋಡೆಯ
ಹಳೆಯ ಮೊಳೆಗೆ
ಹೊಸ ಕ್ಯಾಲೆಂಡರ್
ತೂಗು ಹಾಕಿದರೆ
ಹೊಸವರ್ಷ ಆದಿತೇ...!!

ಹೊಸ ಭಾವಗಳ
ತೆರೆದಿಡುವ ಭರದಿ
ಕುಡಿದು ಕುಣಿದು
ತಿಂದು ಪಳೆಯುಳಿಕೆ
ಎಲ್ಲೆಂದರಲ್ಲಿ ಎಸೆದರೆ
ಹೊಸವರ್ಷ ಆದಿತೇ...!


ಉದಯ ಕಾಲದ ಆರ್ಕನು
ಹೊಸವರ್ಷವೆಂದು
ತುಸು ತಡಮಾಡುವನೆ
ಬೆಳಕು ಹರಿಸಲು.

ಬೆಳಗುತಿರಲಿ ಬಾಳದೀವಿಟಿ
ಹಳತು ಹೊಸತು ಎನದೆ
ಅನವರತ ನಮ್ಮೊಳಗೆ.





ಜಗದೀಶರಾಂ ಶೆಟ್ಟಿಗಾರ್ ಜಪ್ತಿ
ಕುಂದಾಪುರ






ಯತೀಶ್ ಎಲ್. ಶೆಟ್ಟಿಗಾರ್,
ಸಿದ್ಧಕಟ್ಟೆ ,
ವಿದ್ಯಾರಣ್ಯಪುರ, ಬೆಂಗಳೂರು

# ಸಿಟಿ ಬಸ್ಸು

ಮುಂಜಾನೆ ಹಕ್ಕಿಗಳ ಚಿಲಿಪಿಲಿ ನಾದ ಇಲ್ಲ. ಎತ್ತೆತ್ತಲು ಕರ್ಕಶ ಶಬ್ದಗಳು. ತಂಪು ಹಸಿರು ಮರಗಳಿಲ್ಲ. ಗಾಳಿಯಲ್ಲಿ ಬಿಸಿಯುಸಿರು. ಈ ಪಟ್ಟಣದ ವಿಷಾನಿಲ ನುಂಗುವುದಕ್ಕಿಂತ ನಮ್ಮ ಹಳ್ಳಿಯ ಶುದ್ಧ ಗಾಳಿ ನುಂಗಿ ಬದುಕುವುದು ಉತ್ತಮವೆನಿಸಿತು ಸವಿತಾಳಿಗೆ.

ಹುಟ್ಟಿದ ಹಳ್ಳಿಯಲ್ಲಿ  ಪಿ ಯು ಸಿ. ಮುಗಿಸಿ, ಮುಂದೆ ಪದವಿ ಓದುವ ಆಸೆಯಿಂದ ಪಟ್ಟಣದಲ್ಲಿರುವ ತನ್ನ ಸೋದರ ಮಾವನ ಮನೆಯಲ್ಲಿ ಇದ್ದುಕೊಂಡು ಓದನ್ನು ಮುಂದುವರಿಸಬೇಕಾಗಿ ಬಂತು. ಹಳ್ಳಿಯ ಬದುಕಿಗೆ ಅಂಟಿಕೊಂಡಿದ್ದ ಸವಿತಾಳಿಗೆ ಪಟ್ಟಣದ ಜೀವನ ಕಷ್ಟವಾಯಿತು.

ಮಾವನ ಮನೆಯಲ್ಲಿ ನಸುನಗುತ, ಪಟ್ಟಣದ ಬದುಕಿನಲ್ಲಿ ತನ್ನದೆಯಾದ ರೀತಿಯ ಲವಲವಿಕೆಯನ್ನು ಮೈಗೂಡಿಸಿಕೊಂಡಿರುವ ಸವಿತ, ತನ್ನ ಸ್ನಿಗ್ಧ ಸೌಂದರ್ಯ, ಸರಳತೆ, ಬಿಂಕ ಬಿನ್ನಾಣಗಳಿಂದ ಎಲ್ಲರ ಮಧ್ಯೆ ಎದ್ದು ಕಾಣುವ ವ್ಯಕ್ತಿತ್ವವನ್ನು ರೂಪಿಸಿಕೊಂಡಳು.

ಜಾರುತ್ತಿರುವ  ಚೂಡಿದಾರದ ವೇಲವನ್ನು ಮೇಲೆಳೆದುಕೊಳ್ಳುತ್ತಾ, ದೇವರಕೋಣೆಗೆ ಬಂದು ದೇವರಿಗೆ ನಮಸ್ಕರಿಸುತ್ತಾಳೆ. ಪಟ್ಟಣಕ್ಕೆ ಕಾಲಿಟ್ಟಿರುವ ಸವಿತಳಿಗೆ ಇಂದು ಕಾಲೇಜಿನ ಮೊದಲ ದಿನ. ಒಂದಿಷ್ಟು ಸಡಗರ, ಕಾತರ, ಆತುರ  ಎಂಥದೋ ಅವರ್ಣನೀಯ ಆನಂದ, ಅವ್ಯಕ್ತ ಭಯ ಎಲ್ಲವೂ ಮೇಳೈಸಿ ಎದೆಬಡಿತ ಎಂದಿಗಿಂತ ಇಂದು ಹೆಚ್ಚಿದೆ.

"ಲಂಚ್ ಬಾಕ್ಸ್ ತೆಗೆದುಕೊಂಡಿದ್ದಿಯೇನೇ? ಕಾಲೇಜು ಬಿಟ್ಟ ತಕ್ಷಣ ಬೇಗ ಬಂದ್ಬಿಡು." ಅಡುಗೆಕೋಣೆಯಿಂದ ಅತ್ತೆಯ ಕೂಗು.

"ಆಯ್ತು ಅತ್ತೆ" ಎನ್ನುತ್ತ ತನ್ನೊಳಗೇನೆ ಕಿಲಕಿಲನೆ ನಕ್ಕು, ಕಾಲೇಜಿನ ಹೊಸ ಕಲ್ಪನೆಗಳನ್ನು ಹೊತ್ತು ತೊನೆದಾಡುತ್ತ ನಡೆಯುತ್ತಾಳೆ ಸವಿತಾ.

ಬಸ್ಸಿಗಾಗಿ ಬಸ್ಸ್ ಸ್ಟ್ಯಾಂಡಿಗೆ ಬಂದಾಗ ಎಲ್ಲೆಲ್ಲೂ ಜನವೇ ಜನ. ಮೈಗೆ ತಾಗಿಕೊಂಡೋ, ಸವರಿಕೊಂಡೋ, ಡಿಕ್ಕಿ ಹಾಯ್ದೋ ಹೋಗುವ ಜನ. ಜನಗಳ ಮಧ್ಯೆ ನುಗ್ಗಿಕೊಂಡೇ ಓಡಾಡುವ ಬೈಕುಗಳು, ಆಟೋಗಳು. ಅವುಗಳ ಕರ್ಕಶ ಶಬ್ದ. ಕಣ್ಣುಹಾಯಿಸಿದೆಡೆಯಲ್ಲೆಲ್ಲ ಜನಸಾಗರ.

ಬಸ್ ಸ್ಟ್ಯಾಂಡಿನಲ್ಲಿ ಸಿಟಿ ಬಸ್ಸಿಗಾಗಿ ಕಾದು ನಿಂತ ಕಛೇರಿಗೆ ಹೊರಟ ಗಂಡಸರು, ಹೆಂಗಸರು, ಕಾಲೇಜಿಗೆ ಹೊರಟ ಹುಡುಗ ಹುಡುಗಿಯರು, ಫ್ಯಾಕ್ಟರಿಗೆ ಹೊರಟವರು ಎಲ್ಲರೂ ಜಮಾಯಿಸಿ ಬಿಟ್ಟಿದ್ದಾರೆ. ಆ ಸಾಲಿನಲ್ಲಿ ಬಂದು ನಿಂತ ಸವಿತಳಿಗೆ ಮೈಯೆಲ್ಲಾ ಜಿಟಿ ಜಿಟಿ. ಬಸ್ ಬರ್‍ರನೆ ಬರುತ್ತಿದ್ದಂತೆ ಅದು ನಿಲ್ಲುವ ಮೊದಲೇ ಹಿಂದಿನ ಮುಂದಿನ ಡೋರ್ ಹತ್ತಲು ಪೈಪೋಟಿ. ಹತ್ತುವವರ ಮಧ್ಯೆ ಸಿಕ್ಕಿಬಿದ್ದಳು ಸವಿತ. ಅವಳಿಗೆ ತಿಳಿಯದೆಯೇ ಜನರ ನೂಕಾಟದಲ್ಲಿ ತೇಲಿ, ಬಸ್ಸಿನ ಒಳಗೆ ಸೇರಿಬಿಟ್ಟ ಸವಿತ, ಜನರ ಕೋಟೆಯಲ್ಲೀಗ ಬಂಧಿಯಾಗಿ, ಸುತ್ತಲಿನವರ ಬಿಸಿಯುಸಿರು, ಬೆವರು ವಾಸನೆ, ಗದ್ದಲ, ಕಿವಿಯ ತಮಟೆಗಳು ಒಡೆದು ಹೋಗುವಂತೆ ಡ್ರೈವರ್ನ ಹಾರ್ನ್, ಟಿಕೇಟ್ ಟಿಕೇಟ್ ಎನ್ನುವ ಕಂಡಕ್ಟರನ ಅರಚಾಟಕ್ಕೆ ಅವಳ ತಲೆಯ ನರಗಳು ಸಿಡಿಯುತ್ತವೆ. ಎಲ್ಲಾ ಸೀಟುಗಳು ಭರ್ತಿ. ಅದು ಎಲ್ಲಿಂದ ಬರುತ್ತಿದ್ದಾರೋ ಜನ. ನಿಲ್ಲಲು ಜಾಗವಿಲ್ಲ. ಬಸ್ ಹೊರಟಾಗ ಮೇಲಿನ ಕಂಬಿ ಹಿಡಿದು ಜೋಲಿ ಹೊಡೆವ ಜನರ ಮಧ್ಯೆ ಹುದುಗಿ ಹೋಗಿರುವ ಸವಿತಳಿಗೆ ಹೊರಗಿನದು ಕಾಣದು, ಒಳಗಿನದ್ದು ಅಷ್ಟೇ. ಬಸ್ಸು ಚಲಿಸಿದಾಗ ಬರುವ ಒಂದಿಷ್ಟು ತಂಪು ಗಾಳಿಗೆ ಕುಸಿದ ಚೈತನ್ಯ ಮತ್ತೆ ಚೇತರಿಸಿಕೊಳ್ಳುತ್ತದೆ. ಹಿಂದೆ ಮುಂದೆ ಯಾರು ಯಾರೋ, ಒಬ್ಬರ ಮುಖ ಮೂತಿಯೂ ಸರಿಯಾಗಿ ಕಾಣದು. ಅಲ್ಲಲ್ಲಿ ಬಸ್ ನಿಂತಾಗ, ಇಳಿಯುವವರಿಗಿಂತ ಹತ್ತುವವರೆ ಅಧಿಕ.

ಗದ್ದಲ ಮಾಡುತ್ತಲೇ ಹತ್ತಿದ ಹುಡುಗರ ಗುಂಪೊಂದು, ಒಳಗಿರುವ ಗುಂಪಿನಲ್ಲಿ ಸಿಕ್ಕಕಡೆ ನುಸುಳುತ್ತದೆ. ಉದ್ದ ಕೂದಲಿನ, ಬಣ್ಣದ ಕನ್ನಡಕದ ಕಿವಿಯೊಂದಕ್ಕೆ ಲೋಲಾಕು ಧರಿಸಿದ, ಗಾಢವಾದ ಬಣ್ಣದ ಶರ್ಟು, ಕೊಳಕು ಜೀನ್ಸ್ ತೊಟ್ಟಿರುವ ಅವರ ಸುತ್ತ ಸಿಗರೇಟಿನ ಘಾಟು ಬೇರೆ. "ಸರ್ಕಳಲೋ.... ಹೋಗಪ್ಪಾ ಮುಂದಕ್ಕೆ... ಒಳ್ಳೆ ಪೀಸ್ ಇದೆ ಕಣ್ಲಾ" ಎಂದು ಗಟ್ಟಿಯಾಗಿ ಅರಚಾಡುವ ಅವರುಗಳು, ಅಮ್ಮನ್  ಅಕ್ಕನ್ ಎಂದೆಲ್ಲ ಬೈದಾಡುತ್ತಾ ತಾವೆಷ್ಟು ಗಾಢವಾದ ಸ್ನೇಹಿತರು ಎಂಬುದನ್ನು ಪ್ರದರ್ಶಿಸುತ್ತಾರೆ. ಇವರ ಅರಚಾಟಕ್ಕೆ ಹೆಂಗಸರು ತಾವಾಗಿಯೇ ಬದಿಗೆ ಸರಿದು ಗುಬ್ಬಚ್ಚಿಗಳಂತಾದರೆ, ಗಂಡಸರು ಕಿಟಕಿಯತ್ತ ಮುಖ ಮಾಡಿ ಮೌನಿಗಳಾಗುತ್ತಾರೆ. ಬಸ್ ಕುಲುಕಾಡುತ್ತಾ ಮುಂದೆ ಹೋಗುತ್ತದೆ.


AI generated image. No photo credits required

"ಏನಮ್ಮಾ.. ಹೇಗಿತ್ತು ಟೈಟಾನಿಕ್ಕು? ಅರೇ..!! ಇಲ್ಲೇ ಇದಾಳಲ್ಲೋ ಆ ಪಿಕ್ಚರ್ ಹೀರೋಯಿನ್ನು" ಎಂದೆಲ್ಲ ಮಾತುಗಳು. ಗೊಳ್ಳನೆ ನಗು. “ಈ ನೆಟೆಡ್ ಬನಿಯನಿಗಿಂತ ಚೂಡಿದಾರವೇ ಮಸ್ತ್ ಐತ್ಲೆ” ಆ ಗಿಜಿಗಿಜಿಯಲ್ಲೂ ಮಜಾ ಮಾಡಿಕೊಳ್ಳುವ ಅವರ ಪರಿ ಅಲ್ಲಿದ್ದವರಿಗೆಲ್ಲ ಕಸಿವಿಸಿಯನ್ನುಂಟು ಮಾಡಿದರೂ, ಪ್ರಶ್ನಿಸುವ ಗೊಡವೆಗೆ ಯಾರೂ ಸಿದ್ಧರಿಲ್ಲ. ತಾಕತ್ತಿನ ಅಭಾವವೂ ಇದ್ದಿರಬೇಕೆಂದು ಕೊಳ್ಳುವ ಸವಿತ, ಇಂಥ ಬಸ್ಸಿನಲ್ಲಿ ತಾನು ದಿನಾಲೂ ಪ್ರಯಾಣಿಸಬೇಕಾಗುವ ಸೌಭಾಗ್ಯಕ್ಕೆ ಮೊದಲ ದಿನವೇ ನಿಡುಸುಯ್ಯುತ್ತಾಳೆ.

ಯಾರೋ ತನ್ನ ಮೇಲೆ ಒರಗಿದಂತಾಗುತ್ತದೆ. ಸಿಗರೇಟಿನ ಗಬ್ಬುನಾತ ಬೇರೆ. ಹಿಂದಿರುಗಿ ನೋಡಲು ಭಯಕ್ಕಿಂತ ಅಸಹ್ಯ ಆವರಿಸಿಕೊಳ್ಳುತ್ತದೆ. ಬಿಡಿಸಿಕೊಳ್ಳುತ್ತಾಳೆ. ಬರಬರುತ್ತಾ ತನ್ನ ಹಿಂಬದಿ ಪೂರ ಒತ್ತಿಕೊಂಡವನಂತೆ ನಿಂತವನ ದೇಹದ ಅಲುಗಾಟ, ಬಿಸಿಯುಸಿರಿಗೆ ಹಲ್ಲು ಕಡಿಯುತ್ತಾಳೆ.

ಅವನು ತನ್ನ ದೇಹದ ಭಾರವನ್ನೆಲ್ಲ ಇವಳಿಗೆ ಒರಗಿಸುವಾಗ ತನ್ನೊಳಗೆ ಕಂಗೆಡುತ್ತಾಳೆ. 'ಮೇಲೆ ಬೀಳಬ್ಯಾಡ್ರೀ' ಎಂದಾಕೆ ದುರುಗುಟ್ಟುತ್ತಾಳೆ. ಅಪಮಾನದಿಂದ ಕುದಿಯುತ್ತಾಳೆ. ಹಿಂಬದಿಗೆ ಬೆಂಕಿ ತಾಗಿದ ಅನುಭವ. ಅವಳು ಸರಿದಂತೆಲ್ಲ ಸವರಾಡುವ ದೇಹ ಅವಳತ್ತಲೇ ತೆರಳುತ್ತದೆ.

"ಗುರು ಹೂವಿನ ಬಳ್ಳಿ ಹಾಂಗೈತಿ." ಹಿಂದಿನಿಂದ ಒಬ್ಬ ಕಿಸಕ್ಕನೆ ನಕ್ಕಾಗ, ಇವಳಿಗಂತೂ ಮೈ ಪಾದರಸ. "ಗುಲಾಬಿಗಿಂತ ನೈಸ್ ಕಾಣಮ್ಮ" ಮೈಗೆ ಹತ್ತಿಕೊಂಡವನ ಪ್ರತಿಕ್ರಿಯೆ. ಒತ್ತಾಯದ ನಗು ಬೇರೆ. ಅವಳು ಸಹಿಸಿಕೊಂಡಂತೆಲ್ಲ ಅವನು ಹಿಂಬದಿ ಪೂರ ಆಕ್ರಮಿಸುತ್ತಿದ್ದಾನೆನ್ನಿಸಿ ಹಲ್ಲು ಮಸೆಯುತ್ತಾಳೆ. ಅವನ ಬಿಸಿಯುಸಿರು ಇವಳ ಕೆನ್ನೆಯನ್ನು ಸುಡುವಾಗ ತಾನೆಲ್ಲಿ ವಾಂತಿ ಮಾಡಿಕೊಂಡು ಬಿಡುವೆನೆಂದವಳಿಗೆ ಗಾಬರಿ. "ಕಾಲೇಜು ಬೇಗ ಬರಬಾರದೆ?" ಪರಿತಪಿಸುತ್ತಾಳೆ.

ಮತ್ತೆ ಜನ ಬಸ್ ಹತ್ತಿ ಹಿಂದಿನಿಂದ ದೂಡುವಾಗ ಅವನು ಬೀಳುವವನಂತಾಡುತ್ತಾನೆ. ಅವಳ ಭುಜವನ್ನು ಹಿಡಿದು ಸಾವರಿಸಿಕೊಳ್ಳುವ ನಟನೆ ಮಾಡುತ್ತಾನೆ.

"ಕೈ ತೆಗೀರಿ" ಈಗವಳು ರೋಷದಿಂದ ಸಣ್ಣಗೆ ಚೀರುತ್ತಾಳೆ. ತಟ್ಟನೆ ಕೈ ತೆಗೆದರೂ, ಹಿಂಬದಿಯ ಒತ್ತಡ ಹೆಚ್ಚಿಸುತ್ತಾನೆ. ಕಣ್ಣುಗಳಲ್ಲಿ ಇರಿಯುವಂತಹ ನಗು.

"ಸರ್ಕೊಳ್ಳಿ..." ಗದರುತ್ತಾಳೆ. "ಯಾವ ಕಡೆ ಸರಿಲಿ ರೋಜಾ ಹೂವೇ?" ಅವನ ತಮಾಷೆ.

"ಸ್ವಲ್ಪ ದೂರ ನಿಂತ್ಕೊಳ್ರೀ, ಮ್ಯಾನರ್ಸ್ ಇಲ್ವೇನ್ರೀ ನಿಮ್ಗೆ?" ಅವಳ ಕೋಪ ಹರಿಹಾಯುತ್ತದೆ.

"ಎಲ್ಲಿದೇರಿ ಜಾಗ, ನೀವೇ ಮೈಮೇಲೆ ಬೀಳ್ತಿದ್ದೀರಿ ಆಗ್ಲಿಂದ".

"ಹೋಗ್ಲಿ ಬಿಡು ಗುರು, ಪಾಪ. ಹೆಣ್ಣು ಮಗು" ಇನ್ನೊಬ್ಬನ ಕೀಟಲೆ. ಅವರ ಗುಂಪು ನಕ್ಕಾಗ, ಬಸ್ಸಿನಲ್ಲಿರುವವರು ಜೊತೆಗೂಡಿ ನಗುವಾಗ ಇವರೆಂತಹ ಜನರಪ್ಪಾ ಅಂತ ವಾಕರಿಕೆ.

ತಿಳಿಹೇಳಲಾಗದ ಮುದುಕರು. ಪ್ರತಿಭಟಿಸಲಾಗದ ಹುಡುಗರು. ಗದರಿಸುವ ಚೈತನ್ಯವೂ ಇಲ್ಲದ ಸೂಟು ಬೂಟಿನ ಅಧಿಕಾರಿಗಳು. ಇದೆಲ್ಲ ಮಾಮೂಲೆಂಬಂತೆ ಮೌನದ ಮೊರೆ ಹೊಕ್ಕ ಹೆಂಗಸರು. ತಮ್ಮ ಪಾಡಿಗೆ ತಾವಿರುವವರೆ ಹೊರತು ಯಾರ ಉಸಾಬರಿ ಯಾರಿಗೆ? ಹಾದಿಯಲ್ಲಿ ಹೋಗುವ ಮಾರಿಯನ್ನು ಮೈ ಮೇಲೆ ಹಾಕಿಕೊಳ್ಳಲು ಯಾರೂ ತಯಾರಿಲ್ಲ.

"ಸರಿಯಾಗಿ ನಿಂತ್ಕೊಳ್ಳಯ್ಯ, ನಿನಗ್ಯಾರು ಅಕ್ಕ ತಂಗೀರಿಲ್ವೆ ಮನೇಲಿ?" ಸವಿತ ಪ್ರತಿಭಟನೆಗೆ ನಿಲ್ಲುತ್ತಾಳೆ.

"ಓಹೋ.. ಈ ರಷ್ನಲಿ ಯಾರೇ ಕೇಳ್ತಾರೆ ನಿನ್ನ ಕೋಪ. ನಿಂತ್ಕೊಳ್ಳೋಕಾಗದಿದ್ರೆ ಇಳ್ದ್ ಹೋಗು" ಅವನು ಹೀನಾಯವಾಗಿ ಮಾತಾಡುತ್ತಾನೆ.

"ಸುಮ್ನೆ ತಲೆ ಹರಟೆ ಮಾಡ್ಬೇಡ. ನೆಟ್ಟಗೆ ನಿಂತ್ಕೋ ಸ್ಟುಪಿಡ್...." ಇವಳು ಕೆರಳಿ ಬಿಡುತ್ತಾಳೆ.

"ಓಹೋ...! ಉಳಿದವರೆಲ್ಲ ಇಲ್ಲಿ ಹೆಂಗಸರಲ್ಲ ನೋಡು, ನೀನೊಬ್ಳೇ ಕಣೇ ನಿಜವಾದ ಹೆಣ್ಣು. ನಿನ್ನಂತಹ ನೈಸ್ ಹುಡುಗೀರು ಸಿಟಿ ಬಸ್ಸಿಗೆಲ್ಲಾ ಬರಬಾರ್ದು ಕಣೇ. ಒಂದು ಕಾರ್ ಇಟ್ಕೋಬೇಕು. ಸಿಟಿ ಬಸ್ ಹತ್ತಿದ್ಮೇಲೆ ಹಿಂದೆ ಮುಂದೆ ಇರೋರ ಜೊತೆ ಸಹಕರಿಸ್ಬೇಕು ಕಣೇ." ಅವನ ಗೇಲಿಗೆ ಆ ಗ್ಯಾಂಗ್ ನಗುವಾಗ, ಬಸ್ಸಿನವರೆಲ್ಲಾ ಪುಸಕ್ಕನೆ ನಕ್ಕು ಅವರ ಪೋಲಿ ಮಾತುಗಳಿಗೆ ಗೌರವ ತಂದುಕೊಡುವಾಗ ಇವಳಿಗೆ ದೇಹದಲ್ಲಿ ಬೆಂಕಿಯ ಜ್ವಾಲೆ ಭುಗಿಲೇಳುತ್ತದೆ. ಆಗಲೇ ಟಿಕೇಟ್, ಟಿಕೇಟ್ ಎನ್ನುತ್ತ ಬರುವ ಕಂಡಕ್ಟರ್ನತ್ತ ದುರುಗುಟ್ಟುತ್ತಾಳೆ.

"ಒಂದಿಷ್ಟು ಜಾಗ ಮಾಡಿಕೊಡ್ರಿ ಕಂಡಕ್ಟ್ರೇ" ಕೋಪದಲ್ಲೂ ಮೃದುವಾದ ಮಾತು.

"ಎಲ್ಲಿಗೆ ಹೋಗ್ಬೇಕು ನೀವು?" ಅವನ ಮಾತಲ್ಲೂ ವ್ಯಂಗ್ಯ.

"ಕಾಲೇಜಿಗೆ"

"ಇನ್ನೇನು ಬಂದ್ಬಿಡುತ್ತೆ, ಸ್ವಲ್ಪ ಅಡ್ಜಸ್ಟ್ ಮಾಡ್ಕೊಂಡು ಹೋಗ್ರಿ."

"ಏನ್ರೀ ಅಡ್ಜಸ್ಟ್ ಮಾಡ್ಕೊಳ್ಳೋದು? ಸ್ವಲ್ಪನಾದ್ರೂ ಮಾನ ಮರ್ಯಾದೆ ಬೇಡ್ವಾ ಇವರಿಗೆ? ನೀವಾದ್ರೂ ಹೇಳ್ಬಾರ್ದಾ?"

"ಏನಮ್ಮಾ ಹೇಳೋದು. ಸಿಟಿ ಬಸ್ ಅಂದ್ಮೇಲೆ ಇದೆಲ್ಲಾ ಮಾಮೂಲು. ನೀವು ಹೊಸಬರು ಅಂತ ಕಾಣತ್ತೆ. ಸ್ವಲ್ಪ ದಿನ ಹೋಗ್ಲಿ, ನೀವು ಇದಕ್ಕೆ ಹೊಂದಿಕೊಳ್ತೀರಿ?" ಪುಸಕ್ಕನೆ ನಕ್ಕು, ಟಿಕೇಟ್ ಟಿಕೇಟ್ ಎನ್ನುತ್ತಾ ಎಲ್ಲರನ್ನು ದೂಡಿಕೊಂಡು ಸಾಗುವ ಅವನ ನಗುವಿಗೆ, ಹಲವು ನಗುಗಳು ಜೊತೆಗೂಡುತ್ತವೆ.

ಈಗ ಅವಳು ಅಸಹಾಯಕಳು. ಡ್ರೈವರ್ ನತ್ತ ನೋಡುತ್ತಾಳೆ. ತನಗೆ ಮುಂದೆ ಕಾಣುವ ದಾರಿಯೊಂದನ್ನು ಬಿಟ್ರೇ ಬೇರೇನೂ ಕಾಣದು ಎಂಬಷ್ಟು ನಿರ್ಲಿಪ್ತನಾಗಿದ್ದಾನೆ ಡ್ರೈವರ್.

ಎಷ್ಟು ಹೊತ್ತಿಗೆ ಈ ಕಾಲೇಜಿನ ಸ್ಟಾಪ್ ಬರುತ್ತೋ ಎಂದು ತನ್ನ ಶೋಚನೀಯ ಸ್ಥಿತಿಯನ್ನು ನೆನಪಿಕೊಳ್ಳುತ್ತಿದ್ದಂತೆ. ಎದುರಿಗೆ ಏನೋ ತಡೆ ಬಂದು ತಟ್ಟನೆ ಬ್ರೇಕ್ ಹಾಕಿದ ಡ್ರೈವರ್.


ಬಲವಿಲ್ಲದೆ ಒಬ್ಬರಿಗೊಬ್ಬರು ಅಂಟಿಕೊಂಡು ನಿಂತವರು, ಒಬ್ಬರ ಮೇಲೆ ಒಬ್ಬರು ಮುಗ್ಗರಿಸಿದಾಗ, ಸವಿತಾಳಿಗೆ ಭಾರ ತಡೆಯಲಾಗದೆ ಅವಳ ಪುಸ್ತಕ ಎಲ್ಲೆಂದರಲ್ಲಿ ಹೋಗಿ ಗಾಳಿಗೆ ತೂರಿಕೊಳ್ಳುವಂತೆ ಎದುರಿಗೆ ಕುಳಿತವನ ಮೇಲೆ ಒರಗಿದಳು.

ಸವಿತ "ಸಾರಿ ಸರ್" ಎನ್ನುತ್ತ ಮೇಲೆದ್ದಳು.

"ಪರ್ವಾಗಿಲ್ಲ" ಚೆಲ್ಲಾಪಿಲ್ಲಿಯಾಗಿ ಬಿದ್ದ ಅವಳ ಪುಸ್ತಕಗಳನ್ನು ಜೋಡಿಸಿ ಕೊಟ್ಟು "ಬನ್ನಿ ಇಲ್ಲಿ ಕುಳಿತ್ಕೊಳ್ಳಿ" ಆ ತರುಣ ತನ್ನ ಸೀಟನ್ನು ಅವಳಿಗೆ ಬಿಟ್ಟು ಎದ್ದು ನಿಲ್ಲುತ್ತಾನೆ. ಆಕ್ರೋಶದ ಕಣ್ಣುಗಳಿಂದ ಆ ತರುಣನನ್ನು ನೋಡುತ್ತಾಳೆ ಸವಿತ.

"ಪ್ಲೀಸ್ ಬನ್ನಿ." ಅವನು ಮತ್ತೊಮ್ಮೆ ಗೌರವ ಸೂಸಿ ಹೇಳುವಾಗ ಅಸಹನೆಯಿಂದ ಕುದಿಯುತ್ತಲೆ ಅವನ ಸೀಟಿನಲ್ಲಿ ಬಂದು ಕೂರ್ತಾಳೆ. ಅವಳಿಗೇನೂ ಖುಷಿಯಾಗುವುದಿಲ್ಲ. ಅವಳ ಕೆಂಪನೆಯ ಕಣ್ಣುಗಳು ಪೋಲಿ ಹುಡುಗನನ್ನು ನೋಡುತ್ತವೆ. ಅವನು ಇವಳನ್ನೇ ನೋಡಿ ತಮಾಷೆಯಲ್ಲಿ ನಗುತ್ತಿರುವುದನ್ನು ಕಂಡ ಸವಿತಾಗೆ ಆ ತರುಣ ಸೀಟು ಬಿಟ್ಟುಕೊಡುವುದರ ಬದಲು ಆ ಪೋಲಿಗಳಿಗೆ ನಾಲ್ಕು ಬಾರಿಸಿದರೆ ಹೆಚ್ಚು ಸಂತೋಷವಾಗ್ತಿತ್ತು ಎನಿಸುತ್ತದೆ.

ಅಷ್ಟರಲ್ಲಿ ಕಾಲೇಜು ಸ್ಟಾಪ್ ಬಂತು. ಒಂದಿಷ್ಟು ಹುಡುಗ ಹುಡುಗಿಯರು ಇಳಿಯುತ್ತಾರೆ. ಸವಿತ ಇಳಿಯುತ್ತಾಳೆ. ಆ ತರುಣ ಇಳಿದುಹೋಗುವ ಇವಳನ್ನೇ ನೋಡುತ್ತಾನೆ. ಅವಳು ಕೃತಜ್ಞತೆ ತೋರದೆ ನಡೆಯುತ್ತಾಳೆ.



ಜಗದೀಶರಾಂ ಶೆಟ್ಟಿಗಾರ್ ಜಪ್ತಿ
ಕುಂದಾಪುರ

# ಶೆಟ್ಟಿಗಾರ ವಾಣಿ

## ಸಮಾಜ ಬಾಂಧವರ ಅವಗಾಹನೆಗಾಗಿ

- ಸಮಾಜದಲ್ಲಿರುವ ಸಾಹಿತ್ಯ ರಂಗದ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಉದ್ದೇಶ ಹೊಂದಿರುವ **ಶೆಟ್ಟಿಗಾರ ವಾಣಿ** ತನ್ನ ಪ್ರಕಟಣೆಯನ್ನು ಪ್ರಾರಂಭಿಸಿ ಪ್ರಗತಿ ಪಥದಲ್ಲಿದ್ದು ಸಮಾಜ ಬಾಂಧವರ ಮೆಚ್ಚುಗೆಗೆ ಪಾತ್ರವಾಗಿದೆ.

- ಸಮಾಜ ಬಾಂಧವರು ಬರೆದಿರುವ ಕಥೆ, ಕವನ, ಪ್ರಬಂಧ, ಪ್ರವಾಸ ಕಥನಗಳು, ವೈಚಾರಿಕ ಲೇಖನಗಳು, ವೃತ್ತಿ ಮತ್ತು ಜೀವನ ಅನುಭವ ಗಾಥೆಗಳು, ನಗೆ ಬರಹಗಳು, ವ್ಯಂಗ್ಯ ಮತ್ತು ರೇಖಾಚಿತ್ರಗಳು ಮೊದಲಾದ ವಿಭಿನ್ನ ಸಾಹಿತ್ಯ ಕೃತಿಗಳನ್ನು ಸ್ವೀಕರಿಸಲಾಗುವುದು.

- ಆಯ್ಕೆಯಾದ ಬರಹಗಳನ್ನು ಪತ್ರಿಕೆಯ ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.

- ಬರಹಗಳ ಆಯ್ಕೆ ಮತ್ತು ಪ್ರಕಟಣೆಯ ವಿಷಯದಲ್ಲಿ ಪತ್ರಿಕೆಯ ತೀರ್ಮಾನವೇ ಅಂತಿಮವಾಗಿರುತ್ತದೆ.

- ಲೇಖಕರು ತಮ್ಮ ಹೆಸರು, ವಿಳಾಸ, ಭಾವಚಿತ್ರ ಮತ್ತು ಕಿರು ಪರಿಚಯವನ್ನು ಲೇಖನದೊಂದಿಗೆ ನಮೂದಿಸಬೇಕು.

- ಪತ್ರಿಕೆಯ ಸರ್ವಾಂಗೀಣ ಪ್ರಗತಿಗೆ ಸಲಹೆ ಸೂಚನೆಗಳನ್ನು ಸಾದರದಿಂದ ಸ್ವೀಕರಿಸಲಾಗುವುದು.

ಆಸಕ್ತರು ತಮ್ಮ ಬರಹಗಳನ್ನು (WORD FILE) ಇಮೇಲ್ ಮೂಲಕ ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ವಿನಂತಿಸಲಾಗಿದೆ (ಹೆಚ್ಚಿನ ಮಾಹಿತಿ, ವಿವರ ಮತ್ತು ನಿಮ್ಮ ಅನಿಸಿಕೆಗಳಿಗೆ ಸಂಪರ್ಕಿಸಿ):

**shettigaravani@gmail.com**
**ವಾಟ್ಸಪ್ ನಂ. 9845660131**

ಪತ್ರಿಕೆಯ ಓದುಗರು ತಮ್ಮ ಅನಿಸಿಕೆ ಮತ್ತು ಸಲಹೆಗಳನ್ನು ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರಿಕೆ:

**shettigaravani@gmail.com**
**Mob. No. 9845660131**